ಸಂಪುಟ : 8 ಸಂಚಿಕೆ : 226 ಪುಟ : 4 ಬೆಲೆ : 3.00 ಶುಕ್ರವಾರ ಅಕ್ಟೋಬರ್ 13, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ

Volume : 8 Issue : 226 Pages : 4 Price : 3.00 Friday October 13, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಅಕ್ಟೋಬರ್ 13 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ: ವಾರ್ಡ್ ನಂ. 29 ರಲ್ಲಿ ರಾಜೀವ್ ಗಾಂಧಿನಗರ ಮೇಲಿನ ಭಾಗ, ಮಸೂತಿ ಲೈನ್, ಡಂಬಳ ಅವರ ಲೈನ್, ಶಿಕ್ಷಕರ ಬಡಾವಣೆ ಭಾಗ 1,2,3,4, ವಾರ್ಡ್ ನಂ. 22 ರಲ್ಲಿ ಗಂಗಿಮಡಿ ಅಕ್ಕಿಯವರ್ ಲೈನ್, ಪಾಮ್ಡೆಯವರ್ ಲೈನ್, ಸಫಾರಿಯವರ ಲೈನ್, ನಿಂಗಪ್ಪನವರ್ ಲೈನ್, ಸ್ವಾಮಿ ಅವರ ಲೈಫ್ ಗಾರ್ಡನ್ ಲೈನ್, ವಾಹಿದ್ ಅವರ್ ಲೈನ್, ಶುದ್ಧ ನೀರಿನ ಘಟಕದ ಹಿಂದಿನ ಭಾಗ 1 2 3 4 5, ವಾರ್ಡ್ ನಂ. 2ರಲ್ಲಿ ಸೆಟ್ಲಿಮೆಂಟ್ ಗಾಂಧಿನಗರ ಸ್ಲಾಬ್ ಮನೆಗಳ ಲೈನ್, ಕುಷ್ಟಗಿ ಲೈನ್, ವೆಲ್ಫೇರ್ ಟೌನ್ ಶಿಪ್, ಸಿಂದಗಿಯವರ ಲೈನ್, ಸುರೇಶ್ ಕಟ್ಟಿಮನಿ ಅವರ ಲೈನ್, ಗಿರಣಿ ಲೈನ್, ಫಾರ್ಮಸಿ ಲೈನ್, ಗಾಂಧಿನಗರ, ವಾರ್ಡ್ ನಂ. 16ರಲ್ಲಿ ಡಿಸಿ ಮಿಲ್ ರಸ್ತೆ, ಡೋರ್ ಗಲ್ಲಿ, ವಾರ್ಡ್ ನಂ. 23, 33, 32 ರಲ್ಲಿ ನಾವಳ್ಳಿಯವರ ಹಳೆ ಕಚೇರಿ, ಕಿಲಾ ಓಣಿ, ಹಣಗಿ ಲೈನ್, ಗುಜ್ಜರ ಬಸ್ತಿ ಲೈನ್, ಸುಣಗಾರ ಓಣಿ, ಕುದರಿಯವರ ಲೈನ್, ಗರಡಿಯವರ ಲೈನ್, ಜೋಡಮಾರುತಿ ಗುಡಿ ಲೈನ್, ಝೋಂಡಾ ಕಟ್ಟಿ ಲೈನ್, ರಂಗನವಾಡ ಲೈನ್, ತ್ರಿಕೋಟೇಶ್ವರ ಗುಡಿ ಲೈನ್

ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಪ್ರಕಟಣೆ ತಿಳಿಸಿದೆ.

ವಿಶೇಷ ಸಂಗೀತ ತಾಳವಾದ್ಯ ಪರೀಕ್ಷೆಯ ಫಲಿತಾಂಶ ಪ್ರಕಟ

■ ವಿಜಯಸಾಕ್ಷಿ ಸುದ್ದಿ, ಗದಗ

ಡಿಸೆಂಬರ್-2022ರಲ್ಲಿ ಜರುಗಿದ ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಯ ಫಲಿತಾಂಶವು ಕರ್ನಾಟಕ ಶಾಲಾ ಶಿಕ್ಷಣ ಮತ್ತು ಮೌಲ್ಯ ನಿರ್ಣಯ ಮಂಡಳಿಯಿಂದ ಪ್ರಕಟವಾಗಿದ್ದು, ಅಂಕಪಟ್ಟಿಗಳು ಬಂದಿರುತ್ತವೆ.

ಉತ್ತೀರ್ಣರಾದ ಅಭ್ಯರ್ಥಿಗಳು ತಮಗೆ ಸಂಬಂಧಿಸಿದ ಅಂಕಪಟ್ಟಿಗಳನ್ನು ಮುಖ್ಯೋಪಾಧ್ಯಾಯರು ಶ್ರೀ ಕುಮಾರೇಶ್ವರ ಕೃಪಾಪೋಷಿತ ಪಂಡಿತ ಪಂಚಾಕ್ಷರಿ ಗವಾಯಿಗಳವರ ಸಂಗೀತ ಪಾಠಶಾಲೆ, ವೀರೇಶ್ವರ ಪುಣ್ಯಾಶ್ರಮ, ಗದಗ ಇವರನ್ನು ಸಂಪರ್ಕಿಸಿ ಅಂಕಪಟ್ಟಿ ಪಡೆದುಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂಖ್ಯೆ 9482164667, 9880618841 ಸಂಪರ್ಕಿಸಬೇಕೆಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಗದಗದ ಪ್ರಾಚಾರ್ಯರು ತಿಳಿಸಿದ್ದಾರೆ.

ರೇಷ್ಮೆ ಕೃಷಿ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಪ್ರತಿ ವರ್ಷದಂತೆ 2023-23ನೇ ಸಾಲಿನ ಪ್ರಗತಿ ಪರ ರೇಷ್ಮೆ ಬೆಳಗಾರರಿಗೆ ಮತ್ತು ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ಇಲಾಖೆ ವತಿಯಿಂದ ರಾಜ್ಯ ಮತ್ತು ಜಿಲ್ಲಾ ಮಟ್ಟದ ಪ್ರಶಸ್ತಿ ಪ್ರದಾನ ಮಾಡುವ ಕಾರ್ಯಕ್ರಮವಿದೆ.

ಜಿಲ್ಲೆಯ ರೇಷ್ಮೆ ಕೃಷಿಯ ವಿವಿಧ ಭಾಗಗಳಲ್ಲಿ ಅತ್ಯುತ್ತಮ ಪ್ರಗತಿ ಸಾಧಿಸಿರುವ ರೇಷ್ಮೆ ಬೆಳೆಗಾರರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗುವುದು. ಆಸಕ್ತರು ಅರ್ಜಿ ಸಲ್ಲಿಸಲು ಅಕ್ಟೋಬರ್ 25 ಕೊನೆಯ ದಿನವಾಗಿದ್ದು, ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ರೇಷ್ಮೆ ಉಪನಿರ್ದೇಶಕರ ಕಚೇರಿ, ಜಿಲ್ಲಾ ಪಂಚಾಯತ್, ಗದಗ ಇಲ್ಲಿ ಸಂಪರ್ಕಿಸಬಹುದಾಗಿದೆ.

ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ (ಡಿ.ಎಸ್.ಟಿ)ವಿಜ್ಞಾನ ಮತ್ತು ಇಂಜನೀಯರಿಂಗ್‌ನಲ್ಲಿ ಪಿಎಚ್‌ಡಿ ಸಂಶೋಧನೆಗೆ ಕರ್ನಾಟಕ ಡಿ.ಎಸ್.ಟಿ. ಪಿ.ಎಚ್.ಡಿ. ಶಿಷ್ಯವೇತನ ಎಂಬ ಕಾರ್ಯಕ್ರಮವನ್ನು ಇಲಾಖೆಯ ಸ್ವಾಯತ್ತ ಸಂಸ್ಥೆಯಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿಯ ಮುಖಾಂತರ ಅನುಷ್ಠಾನಗೊಳಿಸುತ್ತಿದೆ.

2023-24ನೇ ಸಾಲಿನಲ್ಲಿ ಸದರಿ ಯೋಜನೆಯಡಿ ಶಿಷ್ಯವೇತನ ಪಡೆಯಲು ವಿಜ್ಞಾನ ಮತ್ತು ಇಂಜನೀಯರಿಂಗ್ ವಿಷಯಗಳಲ್ಲಿ ಕರ್ನಾಟಕದಲ್ಲಿರುವ ಮಾನ್ಯತೆ ಪಡೆದಿರುವ ವಿಶ್ವವಿದ್ಯಾಲಯ / ಸಂಸ್ಥೆ / ಕಾಲೇಜುಗಳಲ್ಲಿ ಈಗಾಗಲೇ ಪಿಎಚ್‌ಡಿ ಪದವಿಗೆ ನೋಂದಾಯಿತರಾಗಿರುವ ಅರ್ಹ ಸಂಶೋಧನಾ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಲು ಅಕ್ಟೋಬರ್ 30 ಕೊನೆಯ ದಿನವಾಗಿದೆ. ಹೆಚ್ಚಿನ ವಿವರಗಳಿಗಾಗಿ ಮತ್ತು ಅರ್ಜಿ ಸಲ್ಲಿಸುವ ಲಿಂಕ್‌ಗಾಗಿ http://ksteps.karnataka.gov.in ಜಾಲತಾಣಕ್ಕೆ ಭೇಟಿ ನೀಡಬಹುದಾಗಿದೆ.

ಮೇರಿ ಮಾಟಿ ಮೇರಾ ದೇಶ ಕಾರ್ಯಕ್ರಮ

■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಗಾಂಧಿ ಸರ್ಕಲ್‌ದಲ್ಲಿ ಸೋಮವಾರದಂದು ದಕ್ಷಿಣ ಮಧ್ಯ ಕ್ಷೇತ್ರ ಸಾಂಸ್ಕೃತಿಕ ಕೇಂದ್ರ ನಾಗಪುರ, ಇವರ ಸಹಯೋಗದೊಂದಿಗೆ ಜೀವನ ಜ್ಯೋತಿ ಜಾನಪದ ಸಾಂಸ್ಕೃತಿಕ ಹಾಗೂ ನಗರ / ಗ್ರಾಮೀಣಾಭಿವೃದ್ಧಿ ಕಲಾ ಸಂಸ್ಥೆ (ರಿ) ಕೊತಬಾಳ ಇವರು ನಗರದ ಪ್ರಧಾನ ಅಂಚೆ ಕಚೇರಿ ಇವರ ಸಹಯೋಗದೊಂದಿಗೆ ಮೇರಿ ಮಾಟಿ ಮೇರಾ ದೇಶ ಕಾರ್ಯಕ್ರಮ ಜರುಗಿತು. ಈ ಕಾರ್ಯಕ್ರಮವು ನನ್ನ ದೇಶ ನನ್ನ ಮಣ್ಣು ರಕ್ಷಣೆ ನನ್ನ ದೇಶದ ಸೈನಿಕರ ರಕ್ಷಣೆ ಕುರಿತು ತಿಳುವಳಿಕೆ ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರಧಾನ ಅಂಚೆ ಕಚೇರಿಯ ಅಂಚೆ ಪಾಲಕರಾದ ಸವಿತಾ ತೇರದಾಳ, ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಎ.ಎ.ದೊಡ್ಡಮನಿ, ಪುಷ್ಪಾ ಮೆರವಾಡೆ, ಕೆ.ಆರ್. ಉಮೇಶ, ಪೋತರಾಜ ಹಾಗೂ ಅಂಚೆ ಕಚೇರಿಯ ಸಿಬ್ಬಂದಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದರು.

ಕಿತ್ತೂರು ರಾಣಿ ಚನ್ನಮ್ಮ ಜಯಂತಿ ಅ.16ರಂದು ಪೂರ್ವಭಾವಿ ಸಭೆ

■ ವಿಜಯಸಾಕ್ಷಿ ಸುದ್ದಿ, ಗದಗ

ಅಕ್ಟೋಬರ್ 23 ರಂದು ಕಿತ್ತೂರು ರಾಣಿ ಚನ್ನಮ್ಮ ಜಯಂತಿ ಆಚರಿಸುವ ಅಂಗವಾಗಿ ಅಕ್ಟೋಬರ್ 16 ರಂದು ಸಂಜೆ 4.00 ಗಂಟೆಗೆ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದೆ. ಸಮಾಜದ ಮುಖಂಡರು ಸಭೆಗೆ ಹಾಜರಾಗಿ ತಮ್ಮ ಸಲಹೆ/ಅಭಿಪ್ರಾಯಗಳನ್ನು ತಿಳಿಸಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಅವರಿಂದ ಕಾರ್ಯಕ್ರಮ ನಡೆಯುವ ಸ್ಥಳಗಳ ಪರಿಶೀಲನೆ

'ಕರ್ನಾಟಕ ನಾಮಕರಣ-50' ಸಂಭ್ರಮಕ್ಕೆ ಜಿಲ್ಲಾಡಳಿತದ ಸಿದ್ಧತೆ

■ ವಿಜಯಸಾಕ್ಷಿ ಸುದ್ದಿ, ಗದಗ

ಮೈಸೂರು ರಾಜ್ಯಕ್ಕೆ 1973ರಲ್ಲಿ ಕರ್ನಾಟಕ ರಾಜ್ಯ ಎಂದು ಮರುನಾಮಕರಣ ಮಾಡಲಾಗಿದೆ. ಮರುನಾಮಕರಣ ಮಾಡಿ 50 ವರ್ಷಗಳು ಪೂರೈಸಿದ ಹಿನ್ನೆಲೆಯಲ್ಲಿ ನವೆಂಬರ್ 3ರಂದು ಗದಗ ನಗರದಲ್ಲಿ ಅದ್ಧೂರಿ 'ಸುವರ್ಣ ಸಂಭ್ರಮಾಚರಣೆ' ಕಾರ್ಯಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಸೂಚಿಸಿದರು.

> ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತೋಟಗಾರಿಕಾ ಇಲಾಖೆ, ಪ್ರವಾಸೋದ್ಯಮ ಹಾಗೂ ಜಿಲ್ಲಾ ಪಂಚಾಯತಗಳಿಂದ ನಾಡಿನ ಹಾಗೂ ಜಿಲ್ಲೆಯ ಇತಿಹಾಸ, ಸಂಸ್ಕೃತಿ ಪ್ರತಿಬಿಂಬಿಸುವ ರೂಪಕಗಳನ್ನು ತಯಾರಿಸಿ ಪ್ರದರ್ಶಿಸಬೇಕು. ನಗರದ ಪ್ರಮುಖ ವೃತ್ತಗಳನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಬೇಕು. ಬೀದಿಗಳ ಸೌಂದರ್ಯ ಹೆಚ್ಚಿಸಲು ನಗರಸಭೆ ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕು.
>
> – ವೈಶಾಲಿ ಎಂ.ಎಲ್.
> ಜಿಲ್ಲಾಧಿಕಾರಿಗಳು, ಗದಗ.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನವೆಂಬರ್ 2ರಂದು ಹಂಪಿಯಲ್ಲಿ ಹಾಗೂ ನವೆಂಬರ್ 3ರಂದು ಗದುಗಿನಲ್ಲಿ ಕರ್ನಾಟಕ ನಾಮಕರಣಕ್ಕೆ 50 ವರ್ಷಗಳ ಸಂಭ್ರಮಾಚರಣೆ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ನವೆಂಬರ್ 3ರಂದು ಬೆಳಿಗ್ಗೆ ನಗರದ ವೀರನಾರಾಯಣ ದೇವಸ್ಥಾನದಿಂದ ವಿವಿಧ ಕಲಾತಂಡಗಳೊಂದಿಗೆ ತಾಯಿ ಭುವನೇಶ್ವರಿಯ ಭಾವಚಿತ್ರದ ಮೆರವಣಿಗೆ ಆರಂಭವಾಗಲಿದೆ. 30ಕ್ಕೂ ಅಧಿಕ ವಿಶೇಷ ಕಲಾತಂಡಗಳಿಂದ ಪ್ರದರ್ಶನ ಜರುಗಲಿದೆ. ಮೆರವಣಿಗೆಯು ಜಾಮಿಯಾ ಮಸೀದಿ, ಬಸವೇಶ್ವರ ವೃತ್ತ, ಕೆ.ಎಚ್ ಪಾಟೀಲ ವೃತ್ತ, ಪಂ. ಪುಟ್ಟರಾಜು ವೃತ್ತ, ಜನರಲ್ ಕಾರಿಯಪ್ಪ ವೃತ್ತದ ಮೂಲಕ ನಗರದ ಕಾಟನ ಸೇಲ್ ಸೊಸೈಟಿಗೆ ತಲುಪಲಿದೆ.

ಗದಗನಲ್ಲಿ ಜರುಗುವ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ಧರಾಮಯ್ಯ ಸೇರಿದಂತೆ ಸಂಪುಟದ ಸಚಿವರು ಆಗಮಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಶಿಷ್ಟಾಚಾರ ಪಾಲನೆಯೆಡೆಗೆ ▸▸ ಒನೇ ಪುಟಕ್ಕೆ

ಮಾಜಿ ಶಾಸಕ ಬಿ.ಆರ್ ಯಾವಗಲ್ ಅವರ ಆರೋಪಕ್ಕೆ ಪ್ರತಿಕ್ರಿಯಿಸಿದ ಶಾಸಕ ಸಿ.ಸಿ ಪಾಟೀಲ

ಕಾಮಗಾರಿ ಕಳಪೆಯಾಗಿದ್ದರೆ ಸೂಕ್ತ ತನಿಖೆಯಾಗಲಿ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲೆ ಅನೇಕ ರಾಜಕೀಯ ದಿಗ್ಗಜರನ್ನು ಈ ರಾಜ್ಯಕ್ಕೆ ಕೊಟ್ಟಿದೆ. ಬಿ.ಆರ್ ಯಾವಗಲ್ ಅವರು ರಾಜಕೀಯದಲ್ಲಿ ಸೋಲಿನ ಹತಾಶೆಯಿಂದ ಆರೋಪ ಮಾಡಿದ್ದಾರೆ. ನರಗುಂದ ಮತಕ್ಷೇತ್ರದಲ್ಲಿ ಆಗಿರುವ ಅಭಿವೃದ್ಧಿ ಕಾಮಗಾರಿಗಳು ಕಳಪೆಯಾಗಿದ್ದರೆ ಸೂಕ್ತ ತನಿಖೆ ಕೈಗೊಳ್ಳುವುದಕ್ಕೆ ನನ್ನ ಬೆಂಬಲವಿದೆ. ಆದರೆ, ಗುತ್ತಿಗೆದಾರರ ಬಿಲ್ ತಡೆಹಿಡಿಯುವಂತೆ ಮಾಜಿ ಶಾಸಕ ಬಿ.ಆರ್ ಯಾವಗಲ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಪತ್ರ ಬರೆದಿದ್ದೇಕೆ ಎಂದು ನರಗುಂದ ಶಾಸಕ ಸಿ.ಸಿ ಪಾಟೀಲ ಪ್ರಶ್ನಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೊಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಒಂದೆಡೆ ಗುತ್ತಿಗೆದಾರರ ಬಿಲ್ ತಡೆಹಿಡಿಯುವಂತೆ ಪತ್ರ ಬರೆಯುವ ಮಾಜಿ ಶಾಸಕರು, ಅದೇ ಗುತ್ತಿಗೆದಾರರ ಜೊತೆ ನರಗುಂದದಲ್ಲಿ ಸಭೆ ನಡೆಸಿರುವುದು ಅನುಮಾನಕ್ಕೆ ಕಾರಣವಾಗಿದೆ. ಚುನಾವಣೆಯಲ್ಲಿ ಸೋಲು ಅನುಭವಿಸಿ, ಆ ಹತಾಶೆಯಿಂದ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ ಎಂದರು.

ನನ್ನ ಅವಧಿಯಲ್ಲಿ ನರಗುಂದ ಕ್ಷೇತ್ರಕ್ಕೆ 1800 ಕೋಟಿ ರೂ ಅನುದಾನ ತಂದಿದ್ದೇನೆ. ಒಂದು ಕಪ್ಪು ಚುಕ್ಕೆಯೂ ಇಲ್ಲದಂತೆ ಕೆಲಸಗಳಾಗಿವೆ. ಯಾವಗಲ್ ಅವರ ಅವಧಿಯಲ್ಲಿ ಏನು ಮಾಡಿದ್ದಾರೆ? ಕಾಮಗಾರಿ ನಿಲ್ಲಿಸಿ, ಗುತ್ತಿಗೆದಾರರ ಬಿಲ್ ಬಾಕಿ ಇರಿಸುವ ಕೆಲಸ ಮಾಡಿದ್ದಾರೆ. ನರಗುಂದ ಮತಕ್ಷೇತ್ರದಲ್ಲಿ 500 ಕೋಟಿ ರೂ. ಕಾಮಗಾರಿಗಳಲ್ಲಿ ಅವ್ಯವಹಾರ, ಅಕ್ರಮ, ಕಳಪೆ ಕಾಮಗಾರಿ ನಡೆದಿದ್ದರೆ ಚುನಾವಣೆ ಸಂದರ್ಭದಲ್ಲಿಯೇ ಆರೋಪ ಮಾಡಬಹುದಿತ್ತು. ಆ ಸಂದರ್ಭದಲ್ಲಿ ಬಿ.ಆರ್ ಯಾವಗಲ್ ಮಾತ್ರವಲ್ಲ, ಯಾರೂ ಮಾಡ್ದೇ ▸▸ ಒನೇ ಪುಟಕ್ಕೆ

> ಯಾವಗಲ್ಲರು ನರಗುಂದ ಬಂಡಾಯದ ಕಾಲಕ್ಕೆ ಒಂದು ದಿನವೂ ಧರಣಿ ನಡೆಸದೆ, ರೈತ ನಾಯಕ ಎಂದು ಬಿಂಬಿಸಿಕೊಂಡರು. ತಮ್ಮ ಪುತ್ರ ವಿವೇಕ ಯಾವಗಲ್ ಅವರನ್ನು ಸರಕಾರಿ ವಕೀಲರನ್ನಾಗಿ ಮಾಡಿ, ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರನ್ನು ಮರೆತವರು ಆಧಾರರಹಿತ ಆರೋಪ ಮಾಡುತ್ತಿದ್ದಾರೆ. ಅವರೊಬ್ಬ ಅಭಿವೃದ್ಧಿ ವಿರೋಧಿ ರಾಜಕಾರಣಿ.
>
> – ಸಿ.ಸಿ ಪಾಟೀಲ.
> ಶಾಸಕರು, ನರಗುಂದ.

ಅ. 14ರಂದು ಬೆಳಗಾವಿ ವಿಭಾಗ ಮಟ್ಟದ ಯೋಗಾಸನ ಸ್ಪರ್ಧೆಗಳು

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ಗದಗ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಬಾಲಕ-ಬಾಲಕಿಯರ ಬೆಳಗಾವಿ ವಿಭಾಗ ಮಟ್ಟದ ಯೋಗಾಸನ ಸ್ಪರ್ಧೆಗಳು 2023-24ರ ಉದ್ಘಾಟನಾ ಸಮಾರಂಭವನ್ನು ಅಕ್ಟೋಬರ್ 14 ರಂದು ಬೆ 9 ಗಂಟೆಗೆ ಗದಗ ಸಿದ್ಧಲಿಂಗನಗರದ ಶ್ರೀ ಬಸವೇಶ್ವರ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸಚಿವರಾದ ಮಧು ಬಂಗಾರಪ್ಪ ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ.

ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ▸▸ ಒನೇ ಪುಟಕ್ಕೆ

ಸಾರ್ವಜನಿಕರ ಸೇವೆಯಲ್ಲಿ ದೇವರನ್ನು ಕಾಣಿ

■ ವಿಜಯಸಾಕ್ಷಿ ಸುದ್ದಿ, ರೋಣ

ಕಂದಾಯ ಇಲಾಖೆ ಸಾರ್ವಜನಿಕರೊಂದಿಗೆ ನಿಕಟ ಸಂಬಂಧವನ್ನು ಹೊಂದಿರುವ ಮುಖ್ಯ ಇಲಾಖೆಯಾಗಿದೆ. ಸಿಬ್ಬಂದಿಗಳು ಸಾರ್ವಜನಿಕರಿಗೆ ಸರಕಾರದ ಸೌಲಭ್ಯಗಳನ್ನು ಸಮರ್ಥವಾಗಿ ಒದಗಿಸುವ ಮೂಲಕ ದೇವರನ್ನು ಕಾಣಬೇಕು ಎಂದು ನಿರ್ಗಮಿತ ತಹಸೀಲ್ದಾರ ವಾಣಿ ಉಂಕಿ ಹೇಳಿದರು.

ಅವರು ಗುರುವಾರ ತಹಸೀಲ್ದಾರ ಕಚೇರಿಯ ಸಭಾಂಗಣದಲ್ಲಿ ಜರುಗಿದ ಸಮಾರಂಭದಲ್ಲಿ ಸಿಬ್ಬಂದಿಗಳಿಂದ ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದರು.

ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುವುದು ನಿಜಕ್ಕೂ ಹೆಮ್ಮೆ ಪಡುವ ಸಂಗತಿಯಾಗಿದೆ. ಸರಕಾರ ಜಾರಿಗೆ ತರುವ ಅನೇಕ ಮಹತ್ತರವಾದ ಯೋಜನೆಗಳು ಇಲಾಖೆಯಿಂದ ▸▸ ಒನೇ ಪುಟಕ್ಕೆ

ಸಂವಿಧಾನದ ಪೀಠಿಕೆ ಹಾಗೂ ಆಶಯಗಳ ಕುರಿತು ವಿಶೇಷ ಉಪನ್ಯಾಸ

ಸಂವಿಧಾನ ನಮ್ಮದು ಎನ್ನುವ ಭಾವ ಎಲ್ಲರದಾಗಲಿ

■ ವಿಜಯಸಾಕ್ಷಿ ಸುದ್ದಿ, ಗದಗ

ಪ್ರತಿಯೊಬ್ಬರೂ ಸಂವಿಧಾನದ ಪೀಠಿಕೆಯ ಕುರಿತು ತಿಳುವಳಿಕೆ ಹೊಂದಿರುವುದು ಅಗತ್ಯವಾಗಿದೆ ಎಂದು ಕೇರಳದ ಲೋಕಲ್ ಸೆಲ್ಫ್ ಗವರ್ನಮೆಂಟ್‌ನ ಜಂಟಿ ನಿರ್ದೇಶಕ ಸುದೇಶನ ತಿಳಿಸಿದರು.

ಗದಗ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯಿತಿ ಇವರ ಸಹಯೋಗದಲ್ಲಿ ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಹಮ್ಮಿಕೊಂಡಿದ್ದ 'ಸಂವಿಧಾನದ ಪೀಠಿಕೆ ಹಾಗೂ ಆಶಯ'ಗಳ ಕುರಿತು ಬುಧವಾರ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಂವಿಧಾನ ಜಾರಿಯಾದ ನಂತರ ಎಲ್ಲರಿಗೂ ಘನತೆ ಹಾಗೂ ವ್ಯಕ್ತಿತ್ವ ತಂದುಕೊಟ್ಟಿತು. ಅದಕ್ಕಾಗಿ ಸಂ

ಸಾಕ್ಷಿ ಸುಭಾಷಿತ

ನಿನ್ನ ಕರ್ತವ್ಯವನ್ನು ನೀನು ನಿಷ್ಠೆಯಿಂದ ಮಾಡು,
ಮಿಕ್ಕಿದ್ದೆಲ್ಲವನ್ನೂ ದೇವರಿಗೆ ಬಿಡು
–ಹಿತವಚನ

ಸಂಪಾದಕೀಯ

ಕಲಿಕೆ ಜೊತೆಗೆ ಗಳಿಕೆಗೂ ಸಹಕಾರಿಯಾಗಲಿ ಶಿಕ್ಷಣ ನೀತಿ

ರಾಷ್ಟ್ರೀಯ ಶಿಕ್ಷಣ ನೀತಿ ಬದಲಾಗಿ ರಾಜ್ಯ ಸರ್ಕಾರ ಪ್ರತ್ಯೇಕವಾದ ಶಿಕ್ಷಣ ನೀತಿಯನ್ನು ಜಾರಿಗೊಳಿಸಲು ಮುಂದಾಗಿದೆ. ಶಿಕ್ಷಣ ತಜ್ಞರು, ವಿಷಯ ಪರಿಣಿತರನ್ನು ಒಳಗೊಂಡ ಒಟ್ಟು 23 ಜನರ ಸಮಿತಿಯನ್ನು ಸರ್ಕಾರ ರಚನೆ ಮಾಡಿದೆ.

ಯುಜಿಸಿ ಮಾಜಿ ಮುಖ್ಯಸ್ಥ ಪ್ರೋ. ಥೋರಟ್ ಅವರು ಸಮಿತಿ ಮುಖ್ಯಸ್ಥರಾಗಿದ್ದಾರೆ. ಇನ್ನುಳಿದಂತೆ ಅನೇಕ ವಿಶ್ವವಿದ್ಯಾಲಯದ ಕುಲಪತಿಗಳು, ನಿವೃತ್ತ ಐಪಿಎಸ್ ಅಧಿಕಾರಿಗಳು ಸಹ ಸಮಿತಿಯಲ್ಲಿ ಇದ್ದಾರೆ.

ದೇಶದಲ್ಲಿ ಮೊಟ್ಟ ಮೊದಲ ಬಾರಿಗೆ ಹೊಸ ಶಿಕ್ಷಣ ನೀತಿ ಜಾರಿಯಾಗಿದ್ದು ಕರ್ನಾಟಕದಲ್ಲಿ. ಆದರೆ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬರುತ್ತಿದ್ದಂತೆ ಬಿಜೆಪಿ ಸರ್ಕಾರದ ನೂತನ ಶಿಕ್ಷಣ ನೀತಿಯನ್ನ ಸಂಪೂರ್ಣವಾಗಿ ರದ್ದುಗೊಳಿಸುವ ನಿರ್ಧಾರಕ್ಕೆ ಬಂದಿದೆ.

ಕಾಂಗ್ರೆಸ್ ಮತ್ತು ಈ ಹಿಂದಿನ ಬಿಜೆಪಿ ಸರ್ಕಾರದ ಶಿಕ್ಷಣ ನೀತಿಯಿಂದ ವಿದ್ಯಾರ್ಥಿಗಳಿಗೆ ಅನುಕೂಲ ಆಗಿದ್ದಕ್ಕಿಂತ ಅನಾನುಕೂಲತೆಯೆ ಹೆಚ್ಚಾಗಿದೆ. ಶಿಕ್ಷಣ ನೀತಿಯ ಗೊಂದಲದಿಂದ ಕೆಲವರು ಕಲೆ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗದ ಪದವಿ ಕೋರ್ಸ್‌ಗಳನ್ನು ಬಿಟ್ಟು ತಾಂತ್ರಿಕ ಶಿಕ್ಷಣದತ್ತ ಮುಖ ಮಾಡಿದರು. ಆದರೂ ಸಹ ಗೊಂದಲ ಮಾತ್ರ ಪರಿಹಾರ ಆಗಲೇ ಇಲ್ಲ.

ರಾಜ್ಯ ಕಾಂಗ್ರೆಸ್ ಸರ್ಕಾರ ಮುಂದಿನ ದಿನಗಳಲ್ಲಿ ಇಂತಹ ಗೊಂದಲಕ್ಕೆ ಅವಕಾಶ ನೀಡದಂತಹ ಶಿಕ್ಷಣ ನೀತಿ ರೂಪಿಸಬೇಕಿದೆ. ಮುಖ್ಯವಾಗಿ ಮಗು ಏನನ್ನ ಕಲಿಯಬೇಕು, ಏನನ್ನ ಕಲಿಯಬಾರದು ಎನ್ನುವುದಕ್ಕಿಂತ, ಏನನ್ನು ಕಲಿತರೆ ಭವಿಷ್ಯದಲ್ಲಿ ಉದ್ಯೋಗ ಗಳಿಕೆಯ ಮಾರ್ಗ ಕಂಡುಕೊಳ್ಳಲು ಸಾಧ್ಯ ಎನ್ನುವುದನ್ನು ಕಲಿಸುವಂತಾಗಬೇಕು.

ಮುಖ್ಯವಾಗಿ ಮೆಕಾಲೆ ಮಾದರಿಯ ಶಿಕ್ಷಣ ಸಂಪೂರ್ಣ ಬದಲಾಗಬೇಕು. ಶಿಕ್ಷಣ, ವಿಷಯ ತಜ್ಞರ ಜೊತೆಗೆ ಆರ್ಥಿಕ ತಜ್ಞರನ್ನು ಸಹ ಈ ಸಮಿತಿಯಲ್ಲಿ ಸೇರಿಸಿಕೊಂಡು, ಮಕ್ಕಳಿಗೆ ಬಾಲ್ಯದಿಂದಲೇ ಆರ್ಥಿಕತೆಯ ಪಾಠಗಳನ್ನು ಕಲಿಸುವಂತಾಗಬೇಕು.

ಭವಿಷ್ಯದ ಬದುಕಿಗೆ ಬುನಾದಿಯಾಗುವಂತಹ ಜ್ಞಾನವನ್ನು ಕೊಡುವ ಶಿಕ್ಷಣ ಇಂದಿನ ಅನಿವಾರ್ಯ ಮತ್ತು ಅಗತ್ಯವಾಗಬೇಕು. ಅದರ ಜೊತೆಗೆ ದೈಹಿಕ ಶಿಕ್ಷಣ, ನೈತಿಕ ಶಿಕ್ಷಣ, ವ್ಯಕ್ತಿತ್ವ ವಿಕಸನ ವಿಷಯಗಳು ಕಲಿಕೆಯಲ್ಲಿ ಒಳಗೊಳ್ಳುವಂತಾದರೆ ಮಾತ್ರ ಸದೃಢ ಭಾರತ ನಿರ್ಮಾಣ ಮಾಡಲು ಸಾಧ್ಯ.

ಪುಸ್ತಕ ಪರಿಚಯ

ಚಿಮಣಿ ಬೆಳಕಿನಲ್ಲಿ ಅರಳಿದ ಅಕ್ಷರ

ಚಿಮಣಿ ಬೆಳಕು ಅಂದ ತಕ್ಷಣ ಸುಮಾರು 30-35 ವರ್ಷಗಳ ಹಿಂದಿನ ನೆನಪುಗಳು ಮರುಕಳಿಸುತ್ತವೆ. ಅಂದು ಬಹುತೇಕರ ಮನೆಯಲ್ಲಿ ಬೆಳಕಿಗೆ ಆಸರೆಯಾಗಿರುವ, ಕತ್ತಲೆಯನ್ನು ಕಳೆಯುವ ಪುಟ್ಟ ಚಿಮಣಿ, ಕಂದೀಲು ಇಲ್ಲವೇ ಶೀಷೆಗಳಿಗೆ ಸೀಮೆ ಎಣ್ಣೆ ಹಾಕಿ, ಯಾವುದೋ ಬಟ್ಟೆಯನ್ನು ಸುತ್ತಿ ಲಾಡಿಯಂತೆ ಹುರಿ ಮಾಡಿ, ಹಚ್ಚಿಟ್ಟ ಬುಡ್ಡಿ ದೀಪದ ಕೆಳಗೆ ಮನೆಯವರೆಲ್ಲರೂ ಸುತ್ತಲೂ ಕುಳಿತು ಅಭ್ಯಾಸ ಮಾಡುತ್ತಿದ್ದ ಪರಿ ಅದ್ಭುತ. ಅಂತಹ ಕಡುಕಷ್ಟದ ದಿನಗಳಲ್ಲಿಯೂ, ಯಾವುದೇ ಸೌಲಭ್ಯಗಳಿಲ್ಲದ ಸಮಯದಲ್ಲಿಯೂ ನಿರಂತರ ಓದು, ಬರೆಹದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು, ಬದುಕು ಕಟ್ಟಿಕೊಂಡ ಅದೆಷ್ಟೋ ಜನರಿಗೆ ಚಿಮಣಿ ದೀಪದ ಬೆಳಕು ಭವ್ಯ ಭವಿಷ್ಯತ್ತಿನ ಉಜ್ವಲವಾದ ಆಶಾ ಜ್ಯೋತಿಯಾಗಿತ್ತು. ಪ್ರಸ್ತುತ ಸಾಕಷ್ಟು ಸೌಲಭ್ಯಗಳಿದ್ದಾಗ್ಯೂ ಕೂಡ ಯುವಜನತೆ ತಪ್ಪು ದಾರಿಯತ್ತ ನಡೆಯುತ್ತಿದ್ದಾರೆ.



ವೀರಪ್ಪ ತಾಳದವರ ಅವರು ವೃತ್ತಿಯಲಿ ರೈಲ್ವೆ ಇಲಾಖೆಯ ನೌಕರರಾದರೂ ಪ್ರವೃತ್ತಿಯಲ್ಲಿ ಸಾಹಿತಿ, ಬರಹಗಾರ, ಸಂಘಟಕ, ಕಲಾವಿದ ಇಷ್ಟೇ ಅಲ್ಲದೆ, ಹಳ್ಳಿರಂಗ ಶಾಲೆಯ ಸ್ಥಾಪಕ. ತಮ್ಮದೇ ಜಾಗದಲ್ಲಿ ಪುಟ್ಟ ಹಳ್ಳಿರಂಗ ಶಾಲೆಯನ್ನು ಸ್ಥಾಪಿಸಿದವರು. ಸ್ವಂತಕ್ಕೆ ಸ್ವಲ್ಪ ಸಮಾಜಕ್ಕೆ ಸರ್ವಸ್ವ ಎನ್ನುವ ಮಾತಿನಂತೆ ಅಕ್ಷರದ ಬೆಳಕು ನೀಡುತ್ತಿದ್ದಾರೆ.

ಮಿತ್ರ ವೀರಪ್ಪನವರು ಈಗಾಗಲೇ ಕಪ್ಪು ನೆಲದ ಹಾಡು, ನೆಲದವ್ವನ ಕಾವ್ಯ ಎಂಬ ಎರಡು ಕವನ ಸಂಕಲನಗಳನ್ನು ಸಾಹಿತ್ಯ ಲೋಕಕ್ಕೆ ಅರ್ಪಿಸಿದ್ದಾರೆ. ಇದೀಗ ಮತ್ತೊಂದು ವಿನೂತನ ಕಾವ್ಯ ಗುಚ್ಛದೊಂದಿಗೆ ಕನ್ನಡಮ್ಮನ ಅಳಿಲು ಸೇವೆಗೆ ಅಣಿಯಾಗಿದ್ದಾರೆ. ಅವ್ವ ಪ್ರಕಾಶನ ಯಾವಗಲ್ ಇವರಿಂದ ಪ್ರಕಟವಾಗಿರುವ 'ಚಿಮಣಿ ಬೆಳಕಿನ ಅಕ್ಷರ' ಕವನ ಸಂಕಲನದ ಆಕರ್ಷಕ ಮುಖಪುಟವನ್ನು ನೋಡಿದ ಕೂಡಲೇ ಎಂಥವರಿಗಾದರೂ ತಕ್ಷಣವೇ ಕೈಗೆತ್ತಿಕೊಂಡು ಓದಿ ಬಿಡಬೇಕೆಂಬ ಭಾವನೆ ಬರುತ್ತದೆ.

ಪ್ರತಿಯೊಂದು ಕವಿತೆಯ ಶೀರ್ಷಿಕೆಯೂ ಆ ಕಾವ್ಯಕ್ಕೆ ಹಿಡಿದ ಕನ್ನಡಿಯಂತಿವೆ. ಉತ್ತಮ ಸಂದೇಶದೊಂದಿಗೆ ಪ್ರಾಸ, ಲಯ, ರಾಗ, ತಾಳ, ಭಾವದೊಂದಿಗೆ ಸಮ್ಮೇಳತವಾಗಿವೆ. ಕೇವಲ ಪ್ರೀತಿ ಪ್ರೇಮ ಅನುರಾಗ ಅನುಕಂಪದ ಬಲೆಯನ್ನು ಬೀಸದೆ, ಎಲ್ಲಾ ಸ್ಥರದ ಎಲ್ಲಾ ಮಜಲುಗಳನ್ನು ಬಿತ್ತರಿಸುವ ವಿಭಿನ್ನ ವಿನೂತನ ಕಾವ್ಯವಾಗಿದೆ. ಸರಳ ಪದ ಪ್ರಯೋಗಗಳ ಮೂಲಕ ಊಟದಲ್ಲಿ ಉಪ್ಪಿನಕಾಯಿಯಂತೆ ಅಲ್ಲಲ್ಲಿ ಉಪಮೆ, ರೂಪಕಗಳನ್ನು ಬಳಸಿಕೊಂಡು ಕಾವ್ಯದ ಮೆರುಗನ್ನು ಹೆಚ್ಚಿಸಿದ್ದಾರೆ.

ಇವರ "ಇತಿಹಾಸ ಬರೆಯುವೆವು" ಎಂಬ ಕವನದಲ್ಲಿ ಕೆಳವರ್ಗದ ಸಮುದಾಯದವರ ನೋವು ಕಾವು ಸಾವು, ಬದುಕಿನ ಬವಣೆ, ಕಷ್ಟ ಸಹಿಷ್ಣುತೆಗಳ ನಡುವೆ ಕೆಸರಿನಲ್ಲಿ ಕಮಲ ಅರಳುವಂತೆ ಸುತ್ತಮುತ್ತಲ ಸಮಾಜದಲ್ಲಿ ಶೋಷಣೆ, ತುಳಿತ, ಅನ್ಯಾಯ, ದೌರ್ಜನ್ಯಕ್ಕೆ ಒಳಪಟ್ಟು ಸಿಡಿದೆದ್ದು ಜ್ಞಾನದ ಮೂಲಕ ಹೊಸ ನಾಡು ಕಟ್ಟುವ ಪರಿಯನ್ನು ಅದ್ಭುತವಾಗಿ ಚಿತ್ರಿಸಿದ್ದಾರೆ. ಹುಟ್ಟು ಆಕಸ್ಮಿಕವಾದರೂ ಸಾವು ಚರಿತ್ರೆಯಾಗಲಿ ಎಂಬ ಮಾತಿನಂತೆ ತಮ್ಮ ಬೆವರಿನ ಹನಿಗಳನ್ನೇ ಹೊಸ ನಾಡು ಕಟ್ಟುವ ಮೆಟ್ಟಿಲಾಗಿಸಿದ್ದಾರೆ.

ಊರ ದೇವರು ಎಂಬ ಇನ್ನೊಂದು ಕವನದಲ್ಲಿ ಮೂಡಿ ಬಂದಿರುವ ಅಂಶಗಳು ಹೀಗಿವೆ. ಇಲ್ಲಿನ ಪ್ರತಿಯೊಂದು ಸಾಲಿನಲ್ಲಿ ದಮನಿತರ ಮೇಲಾದ ಅನ್ಯಾಯ, ಕ್ರೌರ್ಯ, ಹಿಂಸೆಯಿಂದ ಅವರ ರೋಷ ಆಕ್ರೋಶ, ಸಹನೆ, ತಾಳ್ಮೆ, ಹಸಿವೆಗೆ ಬಸವಳಿದ ಬದುಕಿನ ಬವಣೆಯ ಕರುಣಾಜನಕ ಕತೆ ಓದುವವರ ಕರುಳು ಹಿಂಡುವಂತಿವೆ. ನೆರಳಿಗೆ ಒಂದು ಸೋರು ಇಲ್ಲದಿದ್ದರೂ ಬದುಕಿಗೆ ಆಸರೆ ಬಯಸಿದ ಜನ ಮೌಢ್ಯತೆಯ ಅನಾಚಾರದಲ್ಲಿ ಮುಳುಗಿ ಹೋಗಿರುವುದನ್ನು ಸೊಗಸಾಗಿ ಹೆಣೆದಿದ್ದಾರೆ. ಅಜ್ಞಾನ ಅಂಧಕಾರದ ಬದುಕು ಜ್ಞಾನದ ಬೆಳಕಿನಿಂದ ಮಾತ್ರ ಬದಲಾಗಲು ಸಾಧ್ಯ ಎಂದಿದ್ದಾರೆ.

ಊರ ದೇವರು
ತುತ್ತು ಕೂಳಿಗೆ ಊರೂರು
ಸುಗ್ಗಿ ಹೊರಟವರೊ
ಹಸಿವೆಯಿದ್ರು ಹರಕೆ ಹೊತ್ತು
ಬಲಿ ಕೊಟ್ಟವರೊ !
ಬಡತನ ಉಂಡವರೊ
ಎಂದೂ ಸಿರಿತನ ಕಾಣದವರೊ
ಬಂದ ಬವಣೆಗೆ ಪಾಪ ಎಂದು
ಮುಡಿ ಕೊಟ್ಟವರೊ !!

ಪ್ರಸ್ತುತ ಸಂಕಲನದಲ್ಲಿ ಸಾಕಷ್ಟು ವಿಭಿನ್ನ ನೆಲೆಯಲ್ಲಿ ಮೂಡಿಬಂದಿರುವ ಕವನಗಳಿವೆ. ಒಂದಕ್ಕಿಂತ ಒಂದು ಕವನಗಳು ಓದುಗರನ್ನು ತನ್ಮಯ ಭಾವದಿಂದ ಓದಿಸಿಕೊಂಡು ಹೋಗುತ್ತವೆ. ಓದುತ್ತಾ ಹೋದಂತೆ ಹೊಸ ಹೊಸ ಆಲೋಚನೆಗಳಿಗೆ ಅವಕಾಶ ಕಲ್ಪಿಸುತ್ತವೆ. ತಾರ್ಕಿಕ ಚಿಂತನೆಗೆ ಎಡೆ ಮಾಡಿಕೊಡುತ್ತವೆ. ಸಾಧನೆ ಸಾಧಕನ ಸೊತ್ತೇ ವಿನಃ ಸೋಮಾರಿಯ ಸ್ವತ್ತಲ್ಲ.... ಎಂಬಂತೆ ಸಾಧಿಸಿ ತೋರಿಸಲು ಚಿಮಣಿ ಬೆಳಕಿನ ಅಕ್ಷರ ಚೈತನ್ಯದ ಚಿಲುಮೆಯಾಗಲಿದೆ, ತುಳಿದು ಬದುಕುವವರ ಮಧ್ಯೆ ತಿಳಿದು ಬದುಕಬೇಕು ಎಂದಿದ್ದಾರೆ. ದುಡ್ಡಿಲ್ಲದವನು ಬಡವನಲ್ಲ ಗುರಿ, ಕನಸು, ಆಸೆಗಳಿಲ್ಲದವನು ನಿಜವಾದ ಬಡವ ಎಂಬ ಅರ್ಥದಲ್ಲಿ ಸ್ಫೂರ್ತಿಯ ಹೊಂಗಿರಣ ಸೂಸಿದ್ದಾರೆ. ಇವರಿಂದ ಮತ್ತಷ್ಟು ಮಗದಷ್ಟು ಸಾಹಿತ್ಯ ಕೃತಿ ರತ್ನಗಳು ಮೂಡಿ ಬರಲಿ, ಜ್ಞಾನದ ಬೆಳಕು ನಾಡಿನ ತುಂಬೆಲ್ಲ ಪಸರಿಸಲಿ.

– **ಈಶ್ವರ ಕುರಿ** (ಜಕ್ಕಲಿ).

ಬಿಜೆಪಿ ತನ್ನ ಅವಧಿಯಲ್ಲಿ ಎಷ್ಟು ವಿದ್ಯುತ್ ಉತ್ಪಾದನೆ ಹೆಚ್ಚಿಸಿತ್ತು?: ಡಿಸಿಎಂ ಡಿಕೆಶಿ

■ **ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ನೆರೆಯ ತಮಿಳುನಾಡಿಗೆ ನದಿ ನೀರು ಬಿಡುವಂತೆ ರಾಜ್ಯಕ್ಕೆ ಶಿಫಾರಸು ಮಾಡಿರುವ ಕಾವೇರಿ ನೀರು ನಿಯಂತ್ರಣ ಸಮಿತಿ (ಸಿಡಬ್ಲ್ಯುಆರ್‌ಸಿ) ನಿರ್ದೇಶನದ ವಿರುದ್ಧ ಕರ್ನಾಟಕ ಮತ್ತೊಮ್ಮೆ ಮೇಲ್ಮನವಿ ಸಲ್ಲಿಸಲಿದೆ ಎಂದು ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಗುರುವಾರ ಹೇಳಿದ್ದಾರೆ.

ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಡಿಕೆ ಶಿವಕುಮಾರ್ ಅವರು, ನಮಗೆ 8,000-9,000 ಕ್ಯೂಸೆಕ್ (ರಾಜ್ಯದ ಜಲಾಶಯಗಳಲ್ಲಿ) ಒಳಹರಿವು ಇದೆ. ಆದರೆ ಇನ್ನೂ ನಾವು ರೈತರ ಹಿತಾಸಕ್ತಿಗಳನ್ನು ರಕ್ಷಿಸುತ್ತೇವೆ. ನಾವು ಅದರ ವಿರುದ್ಧ ಮೇಲ್ಮನವಿ ಸಲ್ಲಿಸುತ್ತೇವೆ (CWRC ಶಿಫಾರಸು). ಇನ್ನೂ ಮಳೆಯಿಲ್ಲದಿರುವುದರಿಂದ ನಮಗೆ ತುಂಬಾ ಕಷ್ಟವಾಗಿದೆ ಎಂದು ರಾಜ್ಯ ಜಲಸಂಪನ್ಮೂಲ ಇಲಾಖೆಯ ಉಸ್ತುವಾರಿಯೂ ಆಗಿರುವ ಡಿಕೆ ಶಿವಕುಮಾರ್ ಹೇಳಿದರು.

ಕಾವೇರಿ ವಿಚಾರವಾಗಿ ಮೇಲ್ಮನವಿ ಸಲ್ಲಿಸುತ್ತೇವೆ

ಮಾಧ್ಯಮಗಳ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಶಿವಕುಮಾರ್ ಅವರು, "ಕಾವೇರಿ ನೀರಿನ ಹಂಚಿಕೆ ವಿಚಾರವಾಗಿ ಮತ್ತೊಮ್ಮೆ ಕಾವೇರಿ ನೀರು ನಿಯಂತ್ರಣ ಸಮಿತಿ ಮುಂದೆ ಮೇಲ್ಮನವಿ ಸಲ್ಲಿಸುತ್ತೇವೆ. ಬೆಂಗಳೂರಿನ ಸುತ್ತಮುತ್ತ ಮಳೆ ಸುರಿದಿರುವ ಪರಿಣಾಮ ಬಿಳಿಗುಂಡ್ಲುವಿಗೆ ಹರಿಯುವ ನೀರಿನ ಪ್ರಮಾಣ ಅಲ್ಪ ಪ್ರಮಾಣದಲ್ಲಿ ಸರಿದೂಗಿದೆ. ಮಳೆ ಸುರಿದಿದ್ದು ಎರಡು ಮೂರು ದಿನ ಮಾತ್ರ. 200 ಕ್ಕೂ ಹೆಚ್ಚು ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಇದ್ದು, ಸಂಕಷ್ಟದಲ್ಲಿ ಇದ್ದೇವೆ. ಬೆಂಗಳೂರಿನಲ್ಲಿ ಒಂದೋ ಎರಡೋ ಬಾರಿ ಸಣ್ಣ ಪ್ರಮಾಣದ ಮಳೆಯಾಗಿದೆ, ಆದರೆ ಬಿಳಿಗುಂಡ್ಲುವಿಗೆ ಇನ್ನೂ ಬಂದಿಲ್ಲ.

ವಿದ್ಯಾರ್ಥಿ ಪರಿಷತ್‌ಗೆ ನೇಮಕ

■ **ವಿಜಯಸಾಕ್ಷಿ ಸುದ್ದಿ, ಗದಗ**

ಕರ್ನಾಟಕ ರಾಜ್ಯ ದಲಿತ ವಿದ್ಯಾರ್ಥಿ ಪರಿಷತ್ ಜಿಲ್ಲಾಧ್ಯಕ್ಷ ಸುರೇಶ ವಾಯ್.ಚಲವಾದಿ ಅವರ ಆದೇಶದ ಮೇರೆಗೆ ಕರ್ನಾಟಕ ರಾಜ್ಯ ದಲಿತ ವಿದ್ಯಾರ್ಥಿ ಪರಿಷತ್ ಹೊಳೆ ಆಲೂರ ಹೋಬಳಿಯ ಸಂಚಾಲಕರನ್ನಾಗಿ ಸಮೀಪದ ಕರ್ಕಿಕಟ್ಟಿ ಗ್ರಾಮದ ಯುವ ಮುಖಂಡ ಮಂಜುನಾಥ ಮಾದರ ಇವರನ್ನು ನೇಮಕ ಮಾಡಲಾಗಿದೆ

ಎಂದು ಕರ್ನಾಟಕ ರಾಜ್ಯ ದಲಿತ ವಿದ್ಯಾರ್ಥಿ ಪರಿಷತ್ ರೋಣ ತಾಲೂಕಾಧ್ಯಕ್ಷ ರಮೇಶ ನಂದಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ದಲಿತ ವಿದ್ಯಾರ್ಥಿ ಪರಿಷತ್ ಶೈಕ್ಷಣಿಕ, ಸಾಮಾಜಿಕ, ಹಾಗೂ ಸಾಂಸ್ಕೃತಿಕ ವೇದಿಕೆಯಾಗಿದ್ದು, ಜಿಲ್ಲೆಯ ವಿದ್ಯಾರ್ಥಿಗಳೊಂದಿಗೆ ಪರಿಷತ್ ಬಲಪಡಿಸಿ ಶೋಷಿತ ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಸ್ಪಂದಿಸಿ ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕಾಗಿ ಶ್ರಮಿಸಬೇಕೆಂದು ರಮೇಶ ನಂದಿ ಆದೇಶಿಸಿದ್ದಾರೆ.

ಮಹಿಷ ದಸರಾ ಆಚರಣೆಗೆ ಷರತ್ತುಬದ್ಧ ಅನುಮತಿ

■ **ವಿಜಯಸಾಕ್ಷಿ ಸುದ್ದಿ, ಮೈಸೂರು**

ವಿಶ್ವವಿಖ್ಯಾತ ದಸರಾ ಉದ್ಘಾಟನೆಗೆ ಕೇವಲ ಮೂರು ದಿನಗಳು ಬಾಕಿಯಿರುವಂತೆಯೇ ಮೈಸೂರಿನಲ್ಲಿ ಶುಕ್ರವಾರ ಆಯೋಜಿಸಲಾಗಿರುವ ಮಹಿಷ ದಸರಾ ಆಚರಣೆ ಪರ ಹಾಗೂ ವಿರೋಧದ ನಡುವೆ ಷರತ್ತುಬದ್ಧ ಅನುಮತಿ ನೀಡಿ ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಆದೇಶಿಸಿದ್ದಾರೆ.

ಮಹಿಷ ಪ್ರತಿಮೆಗೆ ಪುಷ್ಪಾರ್ಚನೆ ಮಾಡಲು ಮಹಿಷ ದಸರಾ ಸಮಿತಿ ಉದ್ದೇಶಿಸಿತ್ತು. ಇದಕ್ಕೆ ವಿರುದ್ಧವಾಗಿ ಚಾಮುಂಡಿ ಬೆಟ್ಟ ಚಲೋ ಮಾಡುತ್ತೇವೆ ಎಂದು ಸಂಸದ ಪ್ರತಾಪ್ ಸಿಂಹ ಹೇಳಿದ್ದರು.

ಇವರೆಡಕ್ಕೂ ಪೊಲೀಸ್ ಇಲಾಖೆ ಅನುಮತಿ ನೀಡಿಲ್ಲ. ಬದಲಿಗೆ ನಗರದ ಟೌನ್ ಹಾಲ್ ನಲ್ಲಿ ಮಹಿಷ ದಸರಾ ಆಚರಣೆಗೆ ಅವಕಾಶ ನೀಡಲಾಗಿದ್ದು ವೇದಿಕೆ ಕಾರ್ಯಕ್ರಮಕ್ಕಷ್ಟೇ ಅನುಮತಿ ನೀಡಲಾಗಿದ್ದು ಸಂಭ್ರಮಾಚರಣೆಗೆ ಅವಕಾಶವಿಲ್ಲ. ಮೆರವಣಿಗೆ, ಸಮಾವೇಶ, ರ್‍ಯಾಲಿ, ಪ್ರತಿಭಟನೆ ಮಾಡಬಾರದು. ನೇರವಾಗಿ ಸಭಾ ಕಾರ್ಯಕ್ರಮ ಆರಂಭಿಸಬೇಕು ಪ್ರಚೋದನೆ ನೀಡುವ ಭಾಷಣ ಮಾಡಬಾರದು ಎಂದು ಷರತ್ತುಗಳೊಂದಿಗೆ ಅನುಮತಿ ನೀಡಿ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಆದೇಶಿಸಿದ್ದಾರೆ.

ಟೌನ್ ಹಾಲ್ ಹೊರತುಪಡಿಸಿ ಮೈಸೂರಿನಲ್ಲಿ ಇಂದು ಮಧ್ಯರಾತ್ರಿಯಿಂದ ಅಕ್ಟೋಬರ್ 14ರ ಬೆಳಗ್ಗೆ 6ಗಂಟೆವರೆಗೆ ನಿಷೇಧಾಜ್ಞೆ ವಿಧಿಸಲಾಗಿದೆ. ಯಾವುದೇ ಮೆರವಣಿಗೆ ಪ್ರತಿಭಟನೆ ಮಾಡುವಂತಿಲ್ಲ. ಮದುವೆ ಶಾಲಾಕಾಲೇಜಿಗೆ ತೆರಳುವವರಿಗೆ ಅನ್ವಯವಿಲ್ಲ ಎಂದು ತಿಳಿಸಿದ್ದಾರೆ.

ಚಿನ್ನಾಭರಣ ವ್ಯಾಪಾರಿಗಳು, ಕಾಫಿ ಬೋರ್ಡ್ ಕಾರ್ಯದರ್ಶಿಗೆ ಸಂಬಂಧಿಸಿದ 50 ಕಡೆಗಳಲ್ಲಿ ಐಟಿ ದಾಳಿ

■ **ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಚಿನ್ನಾಭರಣ ವ್ಯಾಪಾರಿಗಳ ಕಚೇರಿಗಳು, ನಿವಾಸ ಮತ್ತು ಕಾಫಿ ಮಂಡಳಿಯ ಕಾರ್ಯದರ್ಶಿ ಎಂ. ಚಂದ್ರಶೇಖರ್‌ಗೆ ಸಂಬಂಧಿಸಿದ ಸ್ಥಳಗಳಲ್ಲಿಯೂ ದಾಳಿ ನಡೆದಿದೆ ಎಂದು ಮೂಲಗಳು ತಿಳಿಸಿವೆ. ಮಲ್ಲೇಶ್ವರಂ, ಸದಾಶಿವನಗರ, ಡಾಲರ್ಸ್ ಕಾಲೋನಿ, ಮತ್ತಿಕೆರೆ, ಸರ್ಜಾಪುರ ರಸ್ತೆ, ಆರ್‌ಎಂವಿ ಎಕ್ಸ್‌ಟೆನ್ಶನ್ ಮತ್ತು ಇತರ ಪ್ರದೇಶಗಳಲ್ಲಿ ದಾಳಿ ನಡೆಸಲಾಗಿದೆ.

ತೆರಿಗೆ ವಂಚನೆ ಹಿನ್ನೆಲೆಯಲ್ಲಿ ಕಳೆದ ವಾರ ಬೆಂಗಳೂರಿನಲ್ಲಿಆಭರಣ ವ್ಯಾಪಾರಿಗಳ ಮೇಲೆ ಇದೇ ರೀತಿ ನಡೆಸಲಾಗಿತ್ತು. ದೊರೆತ ದಾಖಲೆಗಳ ಆಧಾರದ ಮೇಲೆ ಪ್ರಸ್ತುತ ದಾಳಿ ನಡೆಸಲಾಗುತ್ತಿದೆ ಎಂದು ಮೂಲಗಳು ವಿವರಿಸಿವೆ. ಕೆಲವು ಆಭರಣ ವ್ಯಾಪಾರಿಗಳ ಮನೆ ಮತ್ತು ಕಚೇರಿಗಳ ಮೇಲೆ ಮತ್ತೆ ದಾಳಿ ನಡೆಸಲಾಗಿದೆ. ಕಾಫಿ ಮಂಡಳಿ ಕಾರ್ಯದರ್ಶಿ ಚಂದ್ರಶೇಖರ್ ಅವರ ನಿವಾಸ ಮತ್ತು ಕಚೇರಿ ಮೇಲೆ ದಾಳಿ ನಡೆದಿದೆ. ಚಿನ್ನಾಭರಣ ವ್ಯಾಪಾರಿಗಳೊಂದಿಗೆ ಚಂದ್ರಶೇಖರ್ ನಡೆಸಿದ ವಹಿವಾಟಿನ ಹಿನ್ನೆಲೆಯಲ್ಲಿ ದಾಳಿ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

120 ಕಾರುಗಳಲ್ಲಿ ಆಗಮಿಸಿದ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ನಗರದಾದ್ಯಂತ ಏಕಕಾಲದಲ್ಲಿ ದಾಳಿ ನಡೆಸಿದರು. ಚೆನ್ನೈ, ನವದೆಹಲಿಯಿಂದ ತಂಡಗಳನ್ನು ಸಜ್ಜುಗೊಳಿಸಲಾಗಿದೆ. ದಾಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಇನ್ನಷ್ಟೇ ಹೊರಬರಬೇಕಿದೆ.

ಅತ್ತಿಬೆಲೆ ಪಟಾಕಿ ದುರಂತ ಪ್ರಕರಣ: ಸಾವಿನ ಸಂಖ್ಯೆ 16ಕ್ಕೆ ಏರಿಕೆ

■ **ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಅತ್ತಿಬೆಲೆ ಪಟಾಕಿ ಗೋದಾಮಿನಲ್ಲಿ ಸಂಭವಿಸಿದ್ದ

'ಕರ್ನಾಟಕ ನಾಮಕರಣ-50' ಸಂಭ್ರಮಕ್ಕೆ ಜಿಲ್ಲಾಡಳಿತದ ಸಿದ್ಧತೆ

▶▶ ಮೊದಲನೇ ಪುಟದಿಂದ

ಸಭೆಯಲ್ಲಿ ಆಮಂತ್ರಣ ಪತ್ರಿಕೆ, ಶಿಷ್ಟಾಚಾರ, ಕಲಾತಂಡಗಳ ಆಯ್ಕೆ, ವೇದಿಕೆ ಕಾರ್ಯಕ್ರಮ, ಪ್ರಚಾರ ಸೇರಿದಂತೆ ವಿವಿಧ ವಿಷಯಗಳ ಕುರಿತು ಚರ್ಚಿಸಲಾಯಿತು. ಸಭೆಯ ನಂತರ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್ ನೇಮಗೌಡ ಅಧಿಕಾರಿಗಳೊಂದಿಗೆ ಮೆರವಣಿಗೆಯ ಮಾರ್ಗ, ವೇದಿಕೆ ಕಾರ್ಯಕ್ರಮದ ಸ್ಥಳ, ಮುಖ್ಯಮಂತ್ರಿಗಳ ತೆರಳುವ ಮಾರ್ಗಗಳನ್ನು ಪರಿಶೀಲಿಸಿ ಸ್ಥಳದಲ್ಲಿಯೇ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಿದರು.

ಅಧಿಕಾರಿಗಳು ಗಮನಹರಿಸಬೇಕು. ಅಕ್ಟೋಬರ್ 31ರಿಂದ ನವೆಂಬರ್ 3ರವರೆಗೆ ಸರ್ಕಾರಿ ಕಟ್ಟಡ ಹಾಗೂ ವೃತ್ತಗಳನ್ನು ದೀಪಾಲಂಕೃತಗೊಳಿಸಬೇಕು. ಸ್ವಚ್ಛತೆಗೆ ಆದ್ಯತೆ ನೀಡುವಂತೆ ಸೂಚಿಸಿದರು.

ಕಾಟನ್ ಸೇಲ್ ಸೊಸೈಟಿಯಲ್ಲಿ ಜರುಗುವ ಬೃಹತ್ ವೇದಿಕೆ ಕಾರ್ಯಕ್ರಮದಲ್ಲಿ ಕಲಾತಂಡಗಳಿಂದ ಪ್ರದರ್ಶನ ಹಾಗೂ ಸಂಗೀತ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಕಾಟನ್ ಸೇಲ್ ಸೊಸೈಟಿ ಆವರಣವನ್ನು ಶುಚಿಗೊಳಿಸುವದರೊಂದಿಗೆ ಮೆರವಣಿಗೆಯ ಮಾರ್ಗ ಹಾಗೂ ಮುಖ್ಯಮಂತ್ರಿಗಳು ತೆರಳುವ ಮಾರ್ಗದಲ್ಲಿ ಸೂಕ್ತ ಭದ್ರತೆ ಹಾಗೂ ಅಗತ್ಯ ಅಲಂಕಾರಕ್ಕೆ ಮುಂದಾಗುವಂತೆ ತಿಳಿಸಿದರು.

ನಗರದಲ್ಲಿ ಅಲ್ಲಲ್ಲಿ ನಡೆದಿರುವ ಕಾಮಗಾರಿಗಳನ್ನು ಶೀಘ್ರವೇ ಪೂರ್ಣಗೊಳಿಸಬೇಕು. ಕಾರ್ಯಕ್ರಮಕ್ಕೆ ಅಪಾರ ಜನಸ್ತೋಮ ಆಗಮಿಸುವ ನಿರೀಕ್ಷೆಯಿದ್ದು, ಸಂಚಾರ ದಟ್ಟಣೆಯನ್ನು ಪೊಲೀಸ್ ಇಲಾಖೆ ಸಮರ್ಪಕವಾಗಿ ನಿರ್ವಹಿಸಬೇಕು. ಪೊಲೀಸ್ ಇಲಾಖೆಯೊಂದಿಗೆ ವಿವಿಧ ಇಲಾಖೆ ಅಧಿಕಾರಿಗಳು ಸಮನ್ವಯ ಸಾಧಿಸಿ ಕಾರ್ಯಕ್ರಮ ಯಶಸ್ವಿಗೊಳಿಸಲು ನಿರ್ದೇಶಿಸಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ, ಉಪ ವಿಭಾಗಾಧಿಕಾರಿ ಡಾ.ವೆಂಕಟೇಶ ನಾಯ್ಕ, ತಹಸೀಲ್ದಾರ ಶ್ರೀನಿವಾಸಮೂರ್ತಿ ಕುಲಕರ್ಣಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಾರುತಿ ಬ್ಯಾಕೋಡ, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಶಶಿಕಾಂತ ಕೋಟಿಮನಿ, ಜಂಟಿ ಕೃಷಿ ನಿರ್ದೇಶಕಿ ತಾರಾಮಣಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ, ನಗರಸಭೆ ಪೌರಾಯುಕ್ತ ಗಂಗಪ್ಪ ಎಂ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿಗಳು ಹಾಜರಿದ್ದರು.

ಕಾಮಗಾರಿ ಕಳಪೆಯಾಗಿದ್ದರೆ ಸೂಕ್ತ ತನಿಖೆಯಾಗಲಿ

▶▶ ಮೊದಲನೇ ಪುಟದಿಂದ

ಕಾಂಗ್ರೆಸ್ ನಾಯಕರು ಸಹ ಕಳಪೆ ಕಾಮಗಾರಿ ಕುರಿತು ಒಂದೇ ಒಂದು ಆರೋಪ ಮಾಡಲಿಲ್ಲ. ಮತ್ತೀಗ ಈ ಆರೋಪವೇಕೆ ಎಂದು ಪ್ರಶ್ನಿಸಿದರು.

ಇನ್ನು ನರಗುಂದ ಬೈಪಾಸ್‌ಗೆ ಅನುಮೋದನೆ ಸಿಕ್ಕಿದ್ದು ಕಾಂಗ್ರೆಸ್ ಅವಧಿಯಲ್ಲಿ ಎನ್ನುತ್ತಾರೆ. ಅದು ಶುದ್ಧ ಸುಳ್ಳು. ಬೈಪಾಸ್‌ಗಾಗಿ ನಾನು, ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಖುದ್ದಾಗಿ ನಿತಿನ್ ಗಡ್ಕರಿ ಅವರನ್ನು ಭೇಟಿ ಮಾಡಿ ಅನುದಾನ ಕೋರಿದ್ದೆವು. ನರಗುಂದ ಕ್ಷೇತ್ರದಲ್ಲಿ ಇಂಜಿನಿಯರಿಂಗ್ ಕಾಲೇಜೊಂದನ್ನು ಹೊರತುಪಡಿಸಿ ಯಾವಗಲ್ ಅವರ ಕೊಡುಗೆಯೇನಿದೆ ಅವರೇ ವಿಮರ್ಶೆ ಮಾಡಿಕೊಳ್ಳಬೇಕು ಎಂದರು.

ಸಂವಿಧಾನ ನಮ್ಮದು ಎನ್ನುವ ಭಾವ ಎಲ್ಲರದಾಗಲಿ

▶▶ ಮೊದಲನೇ ಪುಟದಿಂದ

ಕಾರ್ಯಕ್ರಮದ ಉದ್ಘಾಟನೆಯ ನಂತರ ಸಂವಿಧಾನದ ಪೀಠಿಕೆಯ ಕುರಿತು ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಹುಲಕೋಟಿಯ ಸಹಕಾರ ರೇಡಿಯೋ ನಿರ್ದೇಶಕ ಜೆ.ಕೆ ಜಮಾದರ ಅವರು ಸಂವಿಧಾನದ ಉಪನ್ಯಾಸವನ್ನು ಕನ್ನಡ ಭಾಷೆಗೆ ಅನುವಾದ ಮಾಡಿದರು.

ಕಾರ್ಯಕ್ರಮದಲ್ಲಿ ಗದಗ-ಬೆಟಗೇರಿ ನಗರಸಭಾಧ್ಯಕ್ಷೆ ಉಷಾ ದಾಸರ, ಉಪಾಧ್ಯಕ್ಷೆ ಸುನಂದಾ ಬಾಕಳೆ, ಮಾಜಿ ಶಾಸಕ ಡಿ.ಆರ್ ಪಾಟೀಲ, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ., ಜಿ.ಪಂ ಉಪಕಾರ್ಯದರ್ಶಿ ಸಿ.ಆರ್ ಮುಂಡರಗಿ, ಕೃಷಿ ಇಲಾಖೆಯ ಜಂಟಿ ನಿರ್ದೇಶಕಿ ತಾರಮಣಿ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ರವಿ ಗುಂಜೀಕರ, ಕನ್ನಡ ಮತ್ತು ಸಂಸ್ಕೃತ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಬಿ., ಜಿಲ್ಲಾ ಅಂಗವಿಕಲ ಹಾಗೂ ಹಿರಿಯ ನಾಗರಿಕರ ಇಲಾಖೆಯ ಸಹಾಯಕ ನಿರ್ದೇಶಕ ಮಹಾಂತೇಶ ಕೆ., ನಗರಸಭೆ, ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು, ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

ಅಸಂಘಟಿತ ಕಾರ್ಮಿಕರ ಗಮನಕ್ಕೆ

■ ವಿಜಯಸಾಕ್ಷಿ ಸುದ್ದಿ, ಗದಗ

ಕೇಂದ್ರ ಸರ್ಕಾರವು ಅಸಂಘಟಿತ ಕಾರ್ಮಿಕರ ಸಮಗ್ರ ರಾಷ್ಟ್ರೀಯ ದತ್ತಾಂಶ ಕ್ರೂಢೀಕರಿಸುವ ಉದ್ದೇಶದಿಂದ 379 ವರ್ಗಗಳ ಎಲ್ಲಾ ಅಸಂಘಟಿತ ಕಾರ್ಮಿಕರನ್ನು ಇ-ಶ್ರಮ ಪೋರ್ಟಲ್ ಮೂಲಕ ಆಗಸ್ಟ್ 26, 2021 ರಿಂದ ನೋಂದಾಯಿಸಲಾಗುತ್ತಿದ್ದು, ಮಾರ್ಚ್ 31-2022 ರವರೆಗೆ ನೋಂದಣಿಯಾಗಿ ಮತ್ತು ಸದರಿ ದಿನಾಂಕದೊಳಗೆ ಅಪಘಾತಗೊಂಡ ಫಲಾನುಭವಿಗಳಿಗೆ ಪ್ರಧಾನಮಂತ್ರಿ ಸುರಕ್ಷಾ ಭೀಮಾ ಯೋಜನೆಯಡಿ ರೂ.2.00 ಲಕ್ಷಗಳ ಅಪಘಾತ ಪರಿಹಾರವನ್ನು ಒದಗಿಸಲಾಗುವುದು.

ಅಪಘಾತದಿಂದ ಮರಣ ಹೊಂದಿದ್ದಲ್ಲಿ ಫಲಾನುಭವಿಯ ಆಧಾರ ಸಂಖ್ಯೆ, ಯುಎಎನ್ ಕಾರ್ಡ್(ಇ-ಶ್ರಮ್ ಕಾರ್ಡ್)/ಸಂಖ್ಯೆ, ಮರಣ ಪ್ರಮಾಣ ಪತ್ರ, ಮರಣಕ್ಕೆ ಕಾರಣದ ವೈದ್ಯಕೀಯ ಪ್ರಮಾಣ ಪತ್ರ, ಎಫ್‌ಐಆರ್/ಪಂಚನಾಮೆ ದಾಖಲಾತಿಗಳನ್ನು ಅವರ ಅವಲಂಬಿತರು ಸಲ್ಲಿಸಬೇಕು.

ಫಲಾನುಭವಿಯ ಆಧಾರ ಸಂಖ್ಯೆ, ಯುಎಎನ್ ಕಾರ್ಡ್(ಇ-ಶ್ರಮ್ ಕಾರ್ಡ್)/ಸಂಖ್ಯೆ, ಅಪಘಾತದಿಂದ ಉಂಟಾದ ಅಂಗವೈಕಲ್ಯವನ್ನು ಸೂಚಿಸುವ ಡಿಸ್ಚಾರ್ಜ್ ಸಾರಾಂಶವನ್ನು ಒಳಗೊಂಡಿರುವ ಆಸ್ಪತ್ರೆಯ ದಾಖಲೆ, ಅಂಗವೈಕಲ್ಯದ ಪ್ರಮಾಣ ಪತ್ರ, ಈ ದಾಖಲೆಗಳನ್ನು ಅಪಘಾತದಿಂದ ಅಂಗವೈಕಲ್ಯ ಹೊಂದಿದ್ದಲ್ಲಿ ಸಲ್ಲಿಸಬೇಕು.

ಅರ್ಜಿಯನ್ನು ಸೂಕ್ತ ದಾಖಲೆಯೊಂದಿಗೆ ಕಾರ್ಮಿಕ ಅಧಿಕಾರಿಗಳ ಕಚೇರಿ, ಗದಗ ಉಪವಿಭಾಗ, ಗದಗ ಕಾರ್ಮಿಕ ಅಧಿಕಾರಿಯವರ ಕಚೇರಿ, ಜಿಲ್ಲಾ ಆಡಳಿತ ಭವನ ಕೊಠಡಿ ಸಂ-124, 1ನೇ ಮಹಡಿ, ಹುಬ್ಬಳ್ಳಿ ರಸ್ತೆ ಗದಗ. ಇಲ್ಲಿ ಅರ್ಜಿ ಸಲ್ಲಿಸಿ ಯೋಜನೆಯ ಸದುಪಯೋಗ ಪಡೆದುಕೊಳ್ಳ ಬಹುದಾಗಿದೆ ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿ ಭೀಮರಾವ ಆರ್ ಜಾಧವ ಅವರು ಪ್ರಕಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಕಾರ್ಮಿಕ ಅಧಿಕಾರಿಯವರ ಕಚೇರಿ, ಜಿಲ್ಲಾ ಆಡಳಿತ ಭವನ ಕೊಠಡಿ ಸಂಖ್ಯೆ 124 , 1ನೇ ಮಹಡಿ , ಹುಬ್ಬಳ್ಳಿ ರಸ್ತೆ ಗದಗ ಇಲ್ಲಿ ಸಂಪರ್ಕಿಸಬಹುದಾಗಿದೆ.

ವಿದ್ಯುತ್ ಪೂರೈಕೆಗೆ ಆಗ್ರಹಿಸಿ ಹೆಸ್ಕಾಂ ಕಚೇರಿಗೆ ಮುತ್ತಿಗೆ: ಬೀಗ ಹಾಕಿ ಪ್ರತಿಭಟಿಸಿದ ರೈತರು

ವಿದ್ಯುತ್ ನೀಡದಿದ್ದರೆ ಕ್ರಿಮಿನಾಶಕವನ್ನಾದರೂ ಕೊಡಿ

■ ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಹಗಲು ವೇಳೆಯಲ್ಲಿ 7 ಗಂಟೆಗಳ ಕಾಲ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಕೆ ಮಾಡಬೇಕೆಂದು ಇಲ್ಲಿಯ ರೈತರು ಹೆಸ್ಕಾಂ ಕಚೇರಿಗೆ ಬೀಗ ಹಾಕಿ ಪ್ರತಿಭಟನೆ ನಡೆಸಿದ ಘಟನೆ ಗುರುವಾರ ನಡೆಯಿತು.

ಕಳೆದ ಒಂದು ವಾರದಿಂದ ಅಸಮರ್ಪಕವಾಗಿ ನೀರಾವರಿ ಪಂಪಸೆಟ್‌ಗಳಿಗೆ ವಿದ್ಯುತ್ ಪೂರೈಕೆಯಾಗುತ್ತಿರುವುದಕ್ಕೆ ಆಕ್ರೋಶಗೊಂಡ ರೈತರು, ಅಧಿಕಾರಿಗಳಿಗೆ ಮೌಖಿಕವಾಗಿ ತಿಳಿಸುತ್ತಾ ಬಂದರೂ ಸಹ ಕಾಳಜಿ ವಹಿಸದ್ದರಿಂದ ಗುರುವಾರ ಬೆಳಿಗ್ಗೆ ಹೆಸ್ಕಾಂ ಕಚೇರಿಗೆ ಮುತ್ತಿಗೆ ಹಾಕಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ಹೊರಗೆ ಬೀಗ ಹಾಕಿ ಪ್ರತಿಭಟಿಸಿದರು. ಹೆಸ್ಕಾಂ ಅಧಿಕಾರಿಗಳು ಹಾಗೂ ಸರಕಾರದ ವಿರುದ್ಧ ರೈತರು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈಗ ನಿಗದಿ ಮಾಡಿದ 5 ತಾಸು ವಿದ್ಯುತ್ ಸರಬರಾಜು ಸಕಾಲಕ್ಕೆ ಪೂರೈಕೆಯಾಗದೇ ರೈತರು ತೀವ್ರ ತೊಂದರೆ ಅನುಭವಿಸುವಂತಾಗಿದೆ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಪ್ರಕಾಶ ಅರಹುಣಸಿ, ದತ್ತಣ್ಣ ಜೋಶಿ ರಮೇಶ ಹಳ್ಳಿ, ವೆಂಕಟೇಶ ದೊಂಗಡೆ ಮಾತನಾಡಿ, ಮುಂಗಾರು ಹಾಗೂ ಹಿಂಗಾರು ಮಳೆ ಕೈಕೊಟ್ಟಿದ್ದರಿಂದ ಗ್ರಾಮದ ರೈತರು ನೀರಾವರಿ ಕೃಷಿ ಮೇಲೆ ಅವಂಲಂಬಿತರಾಗಿದ್ದಾರೆ. ಇನ್ನು ಪ್ರಮುಖವಾದ ವಾಣಿಜ್ಯ ಬೆಳೆ ಸೇವಂತಿಗೆ ಹೂವು ಆದಾಯಕ್ಕೆ ಆಧಾರವಾಗಿದ್ದು ದಸರಾ, ದೀಪಾವಳಿ ಹಬ್ಬದಲ್ಲಿಯೇ ಹೂವು ಕೈಸೇರಬೇಕಿದೆ. ಈ ಸಂದರ್ಭದಲ್ಲಿ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕಡಿತಗೊಳಿಸಿದರೆ ರೈತರು ಸಂಪೂರ್ಣ ನಷ್ಟ ಅನುಭವಿಸಿ ಸಾಲದಲ್ಲಿ ಬೀಳ್ಳುತ್ತಾರೆ. ಆದ್ದರಿಂದ ಮೊದಲಿದ್ದ ಹಾಗೆ ಹಗಲು ಹೊತ್ತಿನಲ್ಲಿ 7 ಗಂಟೆಗಳ ಕಾಲ ವಿದ್ಯುತ್ ಒದಗಿಸಬೇಕು ಎಂದು ಸರಕಾರಕ್ಕೆ ಒತ್ತಾಯಿಸಿದರು.

ರೈತರಾದ ಸುರೇಶ ಕವಲೂರು, ಪರಶುರಾಮ ಕರಿಯಲ್ಲಪ್ಪನವರ, ಮಂಜುನಾಥ ಕವಲೂರು, ಸಿದ್ದು ಮುಳಗುಂದ, ಗವಿಸಿದ್ದಪ್ಪ ಯಲಿಶಿರುಂಜ, ಸಂತೋಷ ಸಂದಿಗೋಡ, ಬಾಳನಗೌಡ ಪಾಟೀಲ, ಕೊಟ್ರಗೌಡ ರೋಣದ, ಬಸವರಾಜ ಮುಳ್ಳಾಳ, ಮಂಜುನಾಥ ಕಿಲ್ಲೇದ, ಕಲ್ಲಯ್ಯ ಕುಲಕರ್ಣಿ, ಈರಪ್ಪ ಬಣವಿ, ಬಸವರಾಜ ಬಣವಿ, ಅಶೋಕ ಮಂದಾಲಿ ಸೇರಿದಂತೆ ಪಾಪನಾಶಿ, ಸಂಭಾಪೂರ ರೈತರು ಪಾಲ್ಗೊಂಡಿದ್ದರು.

ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಹೆಸ್ಕಾ ಸಹಾಯಕ ಅಭಿಯಂತರ ನಾಗರಾಜ ಕುರಿ ಮಾತನಾಡಿ, ವಿಂಡ್ ಪವರ್ ಸೇರಿದಂತೆ ಉಳಿದ ಎಲ್ಲ ವಿದ್ಯುತ್ ಉತ್ಪಾದನಾ ಘಟಕದಲ್ಲಿ ಪರಿಸರ ವೈಪರಿತ್ಯದಿಂದಾಗಿ ಉತ್ಪಾದನೆಯಲ್ಲಿ ಕುಂಠಿತಗೊಂಡಿದೆ. ಆದ್ದರಿಂದ 2 ತಾಸು ಕಡಿಮೆ ಮಾಡಿ 5 ತಾಸು ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ. ರೈತರು ಒಂದು ವಾರ ಸಹಕಾರ ನೀಡಬೇಕೆಂದು ವಿನಂತಿಸಿಕೊಂಡರು.

ಅಧಿಕಾರಿಗಳ ವಿನಂತಿಗೆ ಒಪ್ಪದ ರೈತರು, ಈ ವಾರದಲ್ಲಿ ಸಮರ್ಪಕ ವಿದ್ಯುತ್ ನೀಡದಿದ್ದರೆ ಬೆಳೆ ಒಣಗಿ ಹೋಗುತ್ತವೆ. ನಮಗೆ ಕ್ರಿಮಿನಾಶಕ ಕೊಡಿ ಸಾಯುತ್ತೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಆಗ ಅಧಿಕಾರಿಗಳು ತಮ್ಮ ಮೇಲಾಧಿಕಾರಿಗಳಿಗೆ ದೂರವಾಣಿ ಮೂಲಕ ಚರ್ಚಿಸಿ, 7 ಗಂಟೆಗಳ ಕಾಲ ವಿದ್ಯುತ್ ಪೂರೈಕೆಯ ಭರವಸೆ ನೀಡಿದ ನಂತರ ಪ್ರತಿಭಟನೆಯನ್ನು ಕೈಬೀಡಲಾಯಿತು. ಈ ಸಂದರ್ಭದಲ್ಲಿ ಲಕ್ಕುಂಡಿ 33 ಕೆವಿ ಉತ್ಪಾದನಾ ಕೇಂದ್ರದ ಸಹಾಯಕ ಅಭಿಯಂತರರಾದ ಅಂಬುಜಾ, ಸಹಾಯಕ ಅಭಿಯಂತರ ಎಸ್. ಎಚ್ ಹುಯಿಲಗೋಳ, ಗ್ರಾ.ಪಂ ಅಧ್ಯಕ್ಷ ಕೆ.ಎಸ್ ಪೂಜಾರ ಇದ್ದರು.

ಅ. 14ರಂದು ಬೆಳಗಾವಿ ವಿಭಾಗ ಮಟ್ಟದ ಯೋಗಾಸನ ಸ್ಪರ್ಧೆಗಳು

▶▶ ಮೊದಲನೇ ಪುಟದಿಂದ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್ , ಸಂಸದರುಗಳಾದ ಶಿವಕುಮಾರ ಉದಾಸಿ, ಪಿ.ಸಿ.ಗದ್ದಿಗೌಡರ, ವಿಧಾನಪರಿಷತ್ ಸದಸ್ಯರುಗಳಾದ ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ್, ನರಗುಂದ ಶಾಸಕ ಸಿ.ಸಿ.ಪಾಟೀಲ, ರೋಣ ಶಾಸಕ ಜಿ.ಎಸ್.ಪಾಟೀಲ, ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ, ಗದಗ ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ದಾಸರ, ನಗರಸಭೆ ಉಪಾಧ್ಯಕ್ಷೆ ಸುನಂದಾ ಬಾಕಳೆ, ವಾಣಿಜ್ಯ ತೆರಿಗೆ ಆಯುಕ್ತರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸಿ.ಶಿಖಾ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ ಆಗಮಿಸುವರು.

ಅತಿಥಿಗಳಾಗಿ ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಅಧ್ಯಕ್ಷರಾದ ರವಿ ಗುಂಜೀಕರ್ , ಶಿಕ್ಷಣಾಧಿಕಾರಿಗಳ ಸಂಘದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಅಧ್ಯಕ್ಷರುಗಳು, ಶಾಲಾ ಆಡಳಿತ ಮಂಡಳಿ ಸಂಘದ ಅಧ್ಯಕ್ಷರು, ವಿವಿಧ ಶಿಕ್ಷಕರ ಸಂಘದ ಅಧ್ಯಕ್ಷರುಗಳು, ವಿಕಲಚೇತನರ ಶಿಕ್ಷಕರ ಸಂಘದ ಅಧ್ಯಕ್ಷರು, ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಆಗಮಿಸುವರು.

ಪಟ್ಟಣದಲ್ಲಿ ಶ್ರೀದೇವಿ ಪುರಾಣ ಪ್ರವಚನ ಅ.15ರಿಂದ

■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ನಗರದ ಶ್ರೀ ರೇಣುಕಾದೇವಿ ದೇವಸ್ಥಾನದಲ್ಲಿ ಶ್ರೀದೇವಿ ಪುರಾಣ ಪ್ರವಚನ ನಡೆಯಲಿದೆ. ಅ.15ರಿಂದ ಪ್ರತಿದಿನ ಸಂಜೆ 6 ಗಂಟೆಗೆ ಪ್ರಾರಂಭವಾಗಲಿರುವ ಪುರಾಣಕ್ಕೆ ಪ್ರವಚನಕಾರರಾಗಿ ವೇ.ಮೂರ್ತಿ ರಾಘವ ಶಾಸ್ತ್ರಿಗಳು ಗದಗ ಹಾಗೂ ಪುರಾಣ ಪಠಣಕಾರರಾಗಿ ವೇ. ಮೂರ್ತಿ ಶಿವಯ್ಯ ಅಂದಾನಯ್ಯ ಮರಿದೇವರಮಠ ಮುಳಗುಂದ ಇವರು ಆಗಮಿಸಲಿದ್ದಾರೆ. ಸಂಗೀತಗಾರರಾಗಿ ಮೋಹನ ಮದ್ದಿನ ತಬಲಾ ವಾದಕರಾಗಿ ಯಳವತ್ತಿಯ ನೀಲಕಂಠಪ್ಪ ಕಮ್ಮಾರ ಆಗಮಿಸಲಿದ್ದಾರೆ.

ಪುರಾಣದ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುಳಗುಂದದ ಸಮಾಜ ಸೇವಕಾರಾದ ಗೌರಮ್ಮ ಬಡ್ನಿ ವಹಿಸಲಿದ್ದು, ಉದ್ಘಾಟನೆಯನ್ನು ಮುಂಡರಗಿಯ ಯೋಗ ಸಾಧಕರಾದ ಶೋಭಾ ಪಾಟೀಲ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆಯ ಅಧ್ಯಕ್ಷ ಶಿವಾನಂದ ಬೆಂತೂರ ವಹಿಸಲಿದ್ದಾರೆ. ಅತಿಥಿಗಳಾಗಿ ಶೈಲಾ ಆದಿ, ಶಶಿಕಲಾ ವಡಕಣ್ಣವರ, ಶೋಭಾ ಗುಗ್ಗರಿ, ಮಂಜುಳಾ ಇಟಗಿ, ರತ್ನಕ್ಕ ಬಡಿಗಣ್ಣವರ, ಸುಧಾ ನೀಲಗುಂದ, ಹರ್ಷಲತಾ ದೇಶಪಾಮಡೆ, ಸುಮನ ಚವಡಿ, ಅಕ್ಕಮ್ಮ ನೀಲಗುಂದ, ಶೋಭಾ ಪಾಟೀಲ, ಸುಷ್ಮಾ ಕೆಂಚನಗೌಡ್ರ, ಪಾರವ್ವ ಅಳಣ್ಣವರ, ವೈಜಂತಿಮಾಲಾ ವಂಟಕರ, ದೀಪಾ ಹಳ್ಳಿ, ಕವಿತಾ ದೊಟಿಕಲ್, ವಿನೋದ, ರುದ್ರಣ್ಣ ಗುಳಗುಳಿ, ಎಸ್.ಸಿ ಬಡ್ನಿ, ದ್ಯಾಮಣ್ಣ ನೀಲಗುಂದ, ವಿಜಯ ನೀಲಗುಂದ, ಬಸವರಾಜ ಹಾರೋಗೇರಿ, ಜಗದೀಶ ಬಟ್ಟೂರ, ಮಂಜುನಾಥ ಅಳವಂಡಿ, ಆಂಜನೇಶ ಮಾನೆ, ಗಂಗಾಧರ ಕುಲಕರ್ಣಿ, ನೀಲಕಂಠಪ್ಪ ಕಮ್ಮಾರ, ಮೋಹನ ಮದ್ದಿನ ಆಗಮಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ರೈತರಿಗೆ ತೆಂಗಿನ ಸಸಿಗಳ ವಿತರಣೆ, ತರಬೇತಿ ಕಾರ್ಯಕ್ರಮ

■ ವಿಜಯಸಾಕ್ಷಿ ಸುದ್ದಿ, ಗದಗ

ಐ ಸಿ ಎ ಆ ರ್ - ಕೆ . ಎ ಚ್ ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ ಹಾಗೂ ಐಸಿಎಆರ್-ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ (ಸಿಪಿಸಿಆರ್‌ಐ), ಕಾಸರಗೋಡು, ಕೇರಳ ಇವರ ವತಿಯಿಂದ ಕೆವಿಕೆ ಆವರಣದಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆ ಅಡಿ ರೈತರಿಗೆ ತೆಂಗಿನ ಸಸಿಗಳ ವಿತರಣೆ ಹಾಗೂ ತೆಂಗಿನ ಬೆಳೆಯ ಉತ್ಪಾದನಾ ತಾಂತ್ರಿಕತೆ ಕುರಿತು ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಐಸಿಎಆರ್-ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ ಕಾಸರಗೋಡಿನ

ಸಮರ್ಪಕ ವಿದ್ಯುತ್ ಪೂರೈಕೆಗೆ ರೈತರಿಂದ ಮನವಿ

■ ವಿಜಯಸಾಕ್ಷಿ ಸುದ್ದಿ, ರೋಣ

ತಾಲೂಕಿನಾದ್ಯಾಂತ ಬರಗಾಲ ಆವರಿಸಿದ್ದು, ದಿನಕ್ಕೆ 7 ಗಂಟೆ ತ್ರಿಫೇಸ್ ವಿದ್ಯುತ್‌ನ್ನು ನೀಡುವ ಮೂಲಕ ರೈತರಿಗೆ ನ್ಯಾಯ ಒದಗಿಸಬೇಕು ಎಂದು ರೈತ ಮುತ್ತಣ್ಣ ಚೌಡರೆಡ್ಡಿ ಆಗ್ರಹಿಸಿದರು.

ಅವರು ಗುರುವಾರ ರೋಣ ಹೆಸ್ಕಾಂ ಕಚೇರಿಯ ಇಇ ಚೇತನಕುಮಾರ ಹಾದಿಮನಿಯವರಿಗೆ ಮನವಿ ಸಲ್ಲಿಸಿ ಮಾತನಾಡಿದರು.

ಪ್ರಸಕ್ತ ಸಾಲಿನಲ್ಲಿ ಮುಂಗಾರು ಮಳೆ ನಿರೀಕ್ಷೆಯಂತೆ ಸುರಿದಿಲ್ಲ. ಅಲ್ಲದೆ ಹಿಂಗಾರು ಮಳೆಯೂ ಆಗುವ ಲಕ್ಷಣ ಕಾಣುತ್ತಿಲ್ಲ. ಖುಷ್ಕಿ ಜಮೀನಿನಲ್ಲಿ ಬೆಳೆಗಳು ಸಂಪೂರ್ಣ ಬಾಡಿ ಹೋಗಿದ್ದು, ನೀರಾವರಿ ಪ್ರದೇಶದಲ್ಲಿ ಬೆಳೆಯಲಾಗಿರುವ ಬೆಳೆಗಳು ಸಹ ಬಾಡುತ್ತಿದೆ.

ಹೆಸ್ಕಾಂ ಅಧಿಕಾರಿಗಳು ದಿನಕ್ಕೆ 7 ತಾಸು ವಿದ್ಯುತ್ ಪೂರೈಕೆ ಮಾಡುವ ಮೂಲಕ ರೈತರ ನೆರವಿಗೆ ಧಾವಿಸಬೇಕು ಎಂದು ಆಗ್ರಹಿಸಿದರು.

ಮುಖಂಡ ಮೇಘರಾಜ್ ಭಾವಿ ಮಾತನಾಡಿ, ಮಳೆಯಿಲ್ಲದ ಕಾರಣ ರೈತರು ಬೆಳೆಯ ನಷ್ಟದ ಜೊತೆಗೆ ಆರ್ಥಿಕ ಸಂಕಷ್ಟವನ್ನು ಅನುಭವಿಸುತ್ತಿದ್ದಾರೆ.

ಗಾಯದ ಮೆಲೆ ಬರೆ ಎಳೆದಂತೆ ಹೆಸ್ಕಾಂನವರು ಮಾಡುತ್ತಿರುವುದು ಸಮಂಜಸವಲ್ಲ. ಈ ಮೊದಲಿನಂತೆ ಹಗಲಿನಲ್ಲಿ 7 ತಾಸು ತ್ರಿಫೇಸ್ ವಿದ್ಯುತ್ ಒದಗಿಸಬೇಕು ಎಂದರು.

ಶ್ರೀಧರ ನರೆಗಲ್ಲ, ಸಂಗಪ್ಪ ನವಲಗುಂದ, ಈರಪ್ಪ ಬಾರಕೇರ, ಸುಲೇಮಾನ್ ಹೊಸಮನಿ, ಬಸವರಾಜ ಯಲಿಗಾರ, ಮುತ್ತಣ್ಣ ಪರಡ್ಡಿ, ಸಂಗಯ್ಯ ಅಗ್ನಿಮಠ, ಮಜೀದ್ ನರೆಗಲ್ಲ ಸೇರಿದಂತೆ ಅನೇಕ ರೈತರು ಉಪಸ್ಥಿತರಿದ್ದರು.

ಶ್ರೀ ದುರ್ಗಾದೇವಿ ದೇವಸ್ಥಾನದ ದಸರಾ ಕಾರ್ಯಕ್ರಮ

■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ರೇಲ್ವೆ ಕ್ವಾಟ್ರಸ್‌ನಲ್ಲಿರುವ ಶ್ರೀ ದುರ್ಗಾದೇವಿ ದೇವಸ್ಥಾನದಲ್ಲಿ ನವರಾತ್ರಿ ಉತ್ಸವ ಕಾರ್ಯಕ್ರಮಗಳನ್ನು ಇಲ್ಲಿನ ಯುವಕ ಸಂಘ ಹಮ್ಮಿಕೊಂಡಿದೆ.

ಅ. 19ರಂದು ಮಧ್ಯಾಹ್ನ 3 ಗಂಟೆಗೆ ಮಾರುಕಟ್ಟೆಗೆ ಹೋಗುವುದು, ಸಾಯಂಕಾಲ 5 ಗಂಟೆಗೆ ನವರಾತ್ರಿ ಆರಂಭ, ಶ್ರೀ ದುರ್ಗಾದೇವಿಗೆ ದೀಪ ಘಟಸ್ಥಾಪನೆ ಹಾಕುವುದು. ಅ.20ರಂದು ಬೆಳಿಗ್ಗೆ 8 ಗಂಟೆಗೆ ಫುಟ್‌ಬಾಲ್ ಪಂದ್ಯ, ಮಧ್ಯಾಹ್ನ 1 ಗಂಟೆಗೆ ರಂಗೋಲಿ ಸ್ಪರ್ಧೆ, ಸಾಯಂಕಾಲ 5 ಗಂಟೆಗೆ ಮ್ಯೂಸಿಕಲ್ ಚೇರ್ ಸ್ಪರ್ಧೆ ಇರುತ್ತದೆ.

ಅ.21ರ ಬೆಳಿಗ್ಗೆ 7 ಗಂಟೆಗೆ ಮಹಾಹೋಮ, ಮಧ್ಯಾಹ್ನ 1 ಗಂಟೆಗೆ ಮಹಾಪ್ರಸಾದ ಇರುತ್ತದೆ. ಸಾಯಂಕಾಲ 5 ಗಂಟೆಗೆ ಡ್ಯಾನ್ಸ್ ಕಾರ್ಯಕ್ರಮ, ಅ.22ರಂದು ಸಾಯಂಕಾಲ 8 ಗಂಟೆಗೆ ಭಜನೆ, ಅ.23ರಂದು ಮಹಾನವಮಿ, ಖಂಡೆಪೂಜೆ, ಬೆಳಿಗ್ಗೆ 5 ಗಂಟೆಗೆ ಮಹಾಪೂಜೆ, ಸಾಯಂಕಾಲ 7 ಗಂಟೆಗೆ ಶ್ರೀ ದುರ್ಗಾದೇವಿ ಮಹಾಪೂಜೆ ಹಾಗೂ ಮಹಾಪ್ರಸಾದ ಅನ್ನಸಂತರ್ಪಣೆ ಜರುಗಲಿದೆ.

ಅ. 24, ವಿಜಯದಶಮಿರಂದು ಸಾಯಂಕಾಲ 6 ಗಂಟೆಗೆ ಶ್ರೀ ದುರ್ಗಾದೇವಿಗೆ ಬನ್ನಿ ಮುಡಿಯುವ ಕಾರ್ಯಕ್ರಮ ನಡೆಯಲಿದ್ದು, ಈ ಎಲ್ಲ ಕಾರ್ಯಕ್ರಮಗಳಿಗೆ ಸದ್ಭಕ್ತರು ಭಾಗವಹಿಸಿ ಶ್ರೀ ದುರ್ಗಾದೇವಿಯ ಕೃಪೆಗೆ ಪಾತ್ರರಾಗಬೇಕೆಂದು ಶ್ರೀ ದುರ್ಗಾದೇವಿ ದೇವಸ್ಥಾನದ ಕಮಿಟಿ ವಿನಂತಿಸಿದೆ.

ಲೋಕಾಯುಕ್ತ ಜನಸಂಪರ್ಕ ಸಭೆ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರ ನಿರ್ದೇಶನದಂತೆ ಕರ್ನಾಟಕ ಲೋಕಾಯುಕ್ತ, ಗದಗ ಕಛೇರಿಯ ಪೊಲೀಸ್ ಅಧಿಕಾರಿಗಳು ಬುಧವಾರ ಪಟ್ಟಣದ ತಹಸೀಲ್ದಾರ ಕಚೇರಿ ಸಭಾಭವನದಲ್ಲಿ ಲೋಕಾಯುಕ್ತ ಜನಸಂಪರ್ಕ ಸಭೆ ನಡೆಸಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು.

ಈ ವೇಳೆ ಸರ್ವೆ, ಕಂದಾಯ, ಗ್ರಾಮ ಪಂಚಾಯಿತಿ, ಪುರಸಭೆ, ಹೆಸ್ಕಾಂ, ಕಾರ್ಯನಿರ್ವಾಹಕ ಇಂಜಿನಿಯರ್, ಕೇಂದ್ರ ಲೋಕಾಯುಕ್ತ ಸಹಿತ ಒಟ್ಟು 21 ಅರ್ಜಿಗಳು ಸ್ವೀಕೃತವಾದವು. ಪ್ರಾಮುಖ್ಯತೆಗೆ ತಕ್ಕಂತೆ ಕಾಲಮಿತಿಯೊಳಗೆ ಅರ್ಜಿ/ದೂರುಗಳನ್ನು ಇತ್ಯರ್ಥಪಡಿಸುವಂತೆ ಅಧಿಕಾರಿಗಳಿಗೆ ಲೋಕಾಯುಕ್ತ ಡಿವೈಎಸ್ಪಿ ಶಂಕರ ರಾಗಿ ಸೂಚಿಸಿದರು.

ಈ ವೇಳೆ ಲೋಕಾಯುಕ್ತ ಪೊಲೀಸ್ ಇನ್ಸ್‌ಪೆಕ್ಟರ್ ರವಿ ಪುರುಷೋತ್ತಮ, ತಹಸೀಲ್ದಾರ ಕೆ.ಆನಂದ ಶೀಲ, ಲೋಕಾಯುಕ್ತ ಹೆಡ್ ಕಾನ್‌ಸ್ಟೇಬಲ್ ಪಿ.ಎಚ್ ಗುಬ್ಬಿ, ಎಚ್.ಬಿ ಲಕ್ಕನಗೌಡರ, ವಿ.ಬಿ ಅರಿಶಿಣದ, ಮುತ್ತುರೆಡ್ಡಿ ಬಾರೆಡ್ಡಿ, ಪ್ರಸಾದ ಎಲ್.ಪಿ, ಪುರಸಭೆ ವ್ಯವಸ್ಥಾಪಕಿ ಮಂಜುಳಾ ಹೂಗಾರ, ತೋಟಗಾರಿಕೆ ಅಧಿಕಾರಿ ಸುರೇಶ ಕುಂಬಾರ, ಹೆಸ್ಕಾಂನ ಗುರುರಾಜ.ಸಿ, ತಾಪಂ ಇಓ ಕೃಷ್ಣಪ್ಪ ಧರ್ಮರ್, ಉಪ ನೋಂದಣಾಧಿಕಾರಿ ಎಸ್. ಕೆ ಜಲರೆಡ್ಡಿ ಸೇರಿ ಹಲವರಿದ್ದರು.

ರೋಟರಿ ಕ್ಲಬ್ ಗದಗ-ಬೆಟಗೇರಿ ವತಿಯಿಂದ 188ನೇ ನೇತ್ರ ಶಸ್ತ್ರಚಿಕಿತ್ಸಾ ಶಿಬಿರ

ಅರ್ಹ 9 ಜನರಿಗೆ ನೇತ್ರ ಶಸ್ತ್ರಚಿಕಿತ್ಸೆ

■ ವಿಜಯಸಾಕ್ಷಿ ಸುದ್ದಿ, ಗದಗ

ರೋಟರಿ ಕ್ಲಬ್ ಗದಗ-ಬೆಟಗೇರಿ ವೆಲ್‌ಫೇರ್ ಸೊಸೈಟಿ, ರೋಟರಿ ಕ್ಲಬ್ ಗದಗ-ಬೆಟಗೇರಿ, ಹಾಗೂ ಗದಗ ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆ ಗದಗ ಇವುಗಳ ಸಂಯುಕ್ತಾಶ್ರಯದಲ್ಲಿ ಜರುಗಿದ 188ನೇ ನೇತ್ರ ಶಸ್ತ್ರಚಿಕಿತ್ಸಾ ಶಿಬಿರದಲ್ಲಿ ಹದಿನಾರು ಜನರಿಗೆ ಯಶಸ್ವಿಯಾಗಿ ಕಣ್ಣಿನ ಶಸ್ತ್ರ ಚಿಕಿತ್ಸೆಯನ್ನು ನೆರವೇರಿಸಲಾಯಿತು.

ಸರ್ ಸಿದ್ದಪ್ಪ ಕಂಬಳಿ ಮೆಮೋರಿಯಲ್ ಟ್ರಸ್ಟ್ ಇವರು ಶಿಬಿರದ ಪ್ರಾಯೋಜಕತ್ವವನ್ನು ವಹಿಸಿದ್ದರು. ನೇತ್ರ ತಜ್ಞರಾದ ಡಾ. ಗಜಾನನ ಡಿ.ಚನ್ನಶೆಟ್ಟಿ ಸುಮಾರು 28 ಜನ ರೋಗಿಗಳನ್ನು ತಪಾಸಣೆ ಮಾಡಿ ಶಸ್ತ್ರಚಿಕಿತ್ಸೆಗೆ ಯೋಗ್ಯರಾದ 9 ಜನರಿಗೆ ನೇತ್ರ ಶಸ್ತ್ರಚಿಕಿತ್ಸೆಯನ್ನು ಕೈಗೊಂಡರು. ಪಂಕಜ ಕುಂಬಾರರು ಎಲ್ಲ ರೋಗಿಗಳಿಗೆ ಉಪಹಾರ ವಿತರಿಸಿದರು. ಇದಕ್ಕೂ ಮುನ್ನ ನಡೆದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ರೋಟರಿ ಕ್ಲಬ್ ಗದಗ-ಬೆಟಗೇರಿ ವೆಲ್‌ಫೇರ್ ಸೊಸೈಟಿಯ ಅಧ್ಯಕ್ಷ ರೊ. ಶ್ರೀಧರ ಸುಲ್ತಾನಪೂರ ವಹಿಸಿ, ಸರ್ವರನ್ನೂ ಸ್ವಾಗತಿಸಿ ಸಂಸ್ಥೆಯ ಕಾರ್ಯಕ್ರಗಳನ್ನು ತಿಳಿಸಿದರು. ಸರ್ ಸಿದ್ದಪ್ಪ ಕಂಬಳಿ ಮೆಮೋರಿಯಲ್ ಟ್ರಸ್ಟನ ವ್ಯವಸ್ಥಾಪಕ ಲಿಂಗರಾಜ ಕಂಬಳಿ, ರೊ. ಕಿಶೋರ ರೇವಣಕರ ಸಭೆಯನ್ನುದ್ದೇಶಿಸಿ ಮಾತನಾಡಿದರು.

ರೋಟರಿ ಕ್ಲಬ್ ಗದಗ-ಬೆಟಗೇರಿ ವೆಲ್‌ಫೇರ್ ಸೊಸೈಟಿಯ ಕಾರ್ಯದರ್ಶಿ ರೊ. ಬಾಲಕೃಷ್ಣ ಕಾಮತ, ರೋಟರಿ ಸಂಸ್ಥೆಯ ಅಧ್ಯಕ್ಷ ರೊ. ಚಂದ್ರಮೌಳಿ, ಐಓಎಲ್ ಚೇರಮನ್ ರೊ.ಡಾ. ಶೇಖರ ಡಿ. ಸಜ್ಜನರ, ಸದಸ್ಯರಾದ, ರೊ. ಶಿವಾಚಾರ್ಯ ಎಸ್.ಹೊಸಳ್ಳಿಮಠ, ರೊ. ನರೇಶ ಡಿ.ಜೈನ, ರೊ. ಡಾ. ಆರ್.ಬಿ ಉಪ್ಪಿನ, ರೊ. ಡಾ. ಪ್ರದೀಪ ಉಗಲಾಟ, ರೊ. ಹೆಚ್.ಎಸ್ ಪಾಟೀಲ, ರೊ. ಸಂತೋಷ ಅಕ್ಕಿ, ರೊ. ಮಹಾಂತೇಶ ಬಾತಾಖಾನಿ, ರೊ. ಎಸ್.ವ್ಹಿ ಕುಂಬಾರ, ರೊ. ಅಕ್ಷಯ ಶೆಟ್ಟಿ ಮುಂತಾದವರು ಉಪಸ್ಥಿತರಿದ್ದರು. ರೋಟರಿ ಸಂಸ್ಥೆಯ ಕಾರ್ಯದರ್ಶಿ ರೊ. ತಿರ್ಲಾಪೂರ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

> ಶಸ್ತ್ರಚಿಕಿತ್ಸಾ ಶಿಬಿರದಲ್ಲಿ ರುದ್ರೇಶ, ಜ್ಯೋತಿ ದೊಡ್ಡಮನಿ, ನೇತ್ರ ಹೆಚ್, ಮಲ್ಲಪ್ಪ ಕುಂಬಾರ, ಅಕ್ಷತಾ, ಸಿ.ವ್ಹಿ ಪೂಜಾರ, ಆನಂದ ಸಿಂಗ್ರಿ ನೇತ್ರ ಶಸ್ತ್ರಚಿಕಿತ್ಸೆ ನಡೆಸಲು ಸಹಕಾರ ನೀಡಿದರು. ಚಿಕಿತ್ಸೆಯ ನಂತರ ಯಾವ ರೀತಿ ತಮ್ಮ ಕಣ್ಣಿನ ಕಾಳಜಿ ವಹಿಸಬೇಕೆಂದು ನೇತ್ರ ತಜ್ಞರಾದ ಡಾ. ಗಜಾನನ ಡಿ.ಚನ್ನಶೆಟ್ಟಿಯವರು ಎಲ್ಲ ರೋಗಿಗಳಿಗೆ ತಿಳಿಸಿದರು. ಕಾರ್ಯದರ್ಶಿಗಳಾದ ರೊ. ಬಾಲಕೃಷ್ಣ ಕಾಮತ ಸರ್ವರಿಗೂ ಧನ್ಯವಾದಗಳನ್ನು ತಿಳಿಸಿದರು.

ಬಿಜೆಪಿಯ ವಿಕೆಟ್ ಪತನ । ಅಧಿಕೃತವಾಗಿ 'ಕೈ' ಹಿಡಿದ ಶಿರಹಟ್ಟಿ ಮಾಜಿ ಶಾಸಕ ರಾಮಣ್ಣ ಲಮಾಣಿ

ನನ್ನ ನೋವು ವ್ಯಕ್ತಪಡಿಸಲು ಕಾಂಗ್ರೆಸ್ ಸೇರಿದ್ದೇನೆ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ರಾಜ್ಯಾಧ್ಯಕ್ಷರೂ, ಡಿಸಿಎಂ ಡಿ.ಕೆ ಶಿವಕುಮಾರ, ಮಾಜಿ ಸಿಎಂ ಜಗದೀಶ ಶೆಟ್ಟರ್, ಸಚಿವರಾದ ಹೆಚ್.ಕೆ ಪಾಟೀಲ ಸೇರಿ ಪಕ್ಷದ ಪ್ರಮುಖ ನಾಯಕರ ಸಮ್ಮುಖದಲ್ಲಿ ಗುರುವಾರ ಬಿಜೆಪಿಯ ಮಾಜಿ ಶಾಸಕ ರಾಮಣ್ಣ ಲಮಾಣಿ ಅಧಿಕೃತವಾಗಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಕಾಂಗ್ರೆಸ್ ಸೇರ್ಪಡೆಗೊಂಡ ಬಳಿಕ ರಾಮಣ್ಣ ಲಮಾಣಿ ಮಾತನಾಡಿ, ನಾನು ಯಾರಿಗೂ ಅನ್ಯಾಯ ಮಾಡಿಲ್ಲ. ಚುನಾವಣೆಯ ಕೊನೆಯ ಕ್ಷಣದವರೆಗೂ ಟಿಕೆಟ್ ನೀಡುವ ಭರವಸೆ ನೀಡಿ, ನನ್ನಿಂದ ಕೋಟ್ಯಾಂತರ ರೂ ಪಕ್ಷ ಪ್ರಚಾರಕ್ಕೆ ಖರ್ಚು ಮಾಡಿಸಿದ್ದಾರೆ. ಬಿಜೆಪಿಯವರ ನಡೆ ನನ್ನನ್ನೂ ಸೇರಿ ಅನೇಕರನ್ನು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗುವಂತೆ ಮಾಡಿದೆ. ಪಕ್ಷ ಸೇರ್ಪಡೆಯಾಗಲು ನಾನು ಯಾವುದೇ ಟಿಕೆಟ್ ಕೇಳಿಲ್ಲ ಮತ್ತು ಕಂಡೀಷನ್ ಇಟ್ಟಿಲ್ಲ. ನನ್ನ ನೋವು ತೋರಿಸಲು ನಾನು ಕಾಂಗ್ರೆಸ್ ಸೇರ್ಪಡೆಯಾಗಿದ್ದೇನೆ. ಮುಂಬರುವ ಎಲ್ಲ ಚುನಾವಣೆಗಳಲ್ಲಿ ಜಿಲ್ಲೆಯ ನಾಯಕರಾದ ಎಚ್.ಕೆ ಪಾಟೀಲ ಸೇರಿ ಪಕ್ಷದ ಹಿರಿಯ ನಾಯಕರು ಆಯ್ಕೆ ಮಾಡಿದ ಅಭ್ಯರ್ಥಿಗಳ ಗೆಲುವಿಗಾಗಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ನನ್ನ ರಾಜಕೀಯ ನಾಯಕರಾದ ಜಗದೀಶ ಶೆಟ್ಟರ್ ಮತ್ತು ಡಿಸಿಎಂ ಡಿ.ಕೆ ಶಿವಕುಮಾರ ಅವರು ಬಿಜೆಪಿಯ ಸಾಕಷ್ಟು ಮಾಜಿ ಶಾಸಕರಿಗೆ ಗಾಳ ಹಾಕಿದ್ದಾರೆ. ಅ.20ರೊಳಗೆ ಅನೇಕ ಬಿಜೆಪಿಯ ನಾಯಕರು ಕಾಂಗ್ರೆಸ್ ಸೇರ್ಪಡೆಯಾಗಲಿದ್ದಾರೆ. ನನ್ನ ಅಧಿಕಾರಾವಧಿಯಲ್ಲಿ ಪಕ್ಷಬೇಧ ಮರೆತು ಎಲ್ಲರ ಪ್ರೀತಿ ವಿಶ್ವಾಸ ಗಳಿಸಿದ್ದೇನೆ. ಶಿರಹಟ್ಟಿ ಮತಕ್ಷೇತ್ರದ ಅನೇಕ ಬಿಜೆಪಿ ನಾಯಕರು, ಕಾರ್ಯಕರ್ತರು ಇನ್ನೊಂದು ತಿಂಗಳಲ್ಲಿ ಶ್ರೀಮಂತಗಡದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾಗಲಿದ್ದಾರೆ. ಬಿಜೆಪಿ ನಾಯಕರ ತಪ್ಪು ಹೆಜ್ಜೆ ಮತ್ತು ಅನನುಭವಿ ಶಾಸಕರಿಂದ ಬರುವ ದಿನಗಳಲ್ಲಿ ಬಿಜೆಪಿ ಇನ್ನಷ್ಟು ಕೆಳಕ್ಕಿಳಿಯಲಿದೆ. ಕಾಂಗ್ರೆಸ್ ಪಕ್ಷ ಮತ್ತು ಸರ್ಕಾರದ ಬಲವರ್ಧನೆಗೆ ಪ್ರಯತ್ನ ಮಾಡುತ್ತೇನೆ ಮತ್ತು ನುಡಿದಂತೆ ನಡೆಯುತ್ತೇನೆ ಎಂದರು.

ಈ ವೇಳೆ ಕೆಪಿಸಿಸಿ ಕಾರ್ಯಧ್ಯಕ್ಷ ಸಲೀಂ ಅಹ್ಮದ್, ಮಾಜಿ ಉಪ ಮುಖ್ಯಮಂತ್ರಿ ಲಕ್ಷ್ಮಣ್ ಸವದಿ, ಗದಗ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಜಿ.ಎಸ್ ಪಾಟೀಲ, ಮಾಜಿ ಮಂತ್ರಿ ವಿನಯ ಕುಲಕರ್ಣಿ, ಮಾಜಿ ಶಾಸಕ ಜಿ.ಎಸ್ ಗಡ್ಡದೇವರಮಠ, ಚನ್ನಪ್ಪ ಜಗಲಿ, ಸುಜಾತಾ ದೊಡ್ಡಮನಿ, ಹುಮಾಯುನ ಮಾಗಡಿ, ಜಿ.ಆರ್ ಕೊಪ್ಪದ, ಡಿ.ಡಿ ಮುರ್ನಾಳ ಸೇರಿ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಪಾಲ್ಗೊಂಡಿದ್ದರು.

> 2005-06ರಲ್ಲಿ ಗದಗ ಜಿ.ಪಂನ ಒಟ್ಟು 17 ಕ್ಷೇತ್ರಗಳಲ್ಲಿ ಬಿಜೆಪಿಯ ಏಕೈಕ ಸದಸ್ಯರಾಗಿ ಆಯ್ಕೆಯಾಗಿದ್ದ ರಾಮಣ್ಣ ಲಮಾಣಿ, ಮುಂದೆ 2008ರಲ್ಲಿ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾದರು. 2013ರಲ್ಲಿ ಪಕ್ಷದ ನಾಯಕರಲ್ಲಿನ ಭಿನ್ನಾಭಿಪ್ರಾಯದಿಂದ ಕೇವಲ 315 ಮತಗಳ ಅಂತರದಿಂದ ಸೋಲುವಂತಾಯಿತು. 5 ವರ್ಷಗಳ ಕಾಲ ನಿರಂತರ ಕ್ಷೇತ್ರ ಸುತ್ತುವ, ಜನರ ಕಷ್ಟಗಳಿಗೆ ಸ್ಪಂದಿಸುವ ಮೂಲಕ 2018ರಲ್ಲಿ 30 ಸಾವಿರ ಮತಗಳ ಅಂತರದಲ್ಲಿ ಗೆದ್ದು ರಾಜ್ಯ ರಾಜಕಾರಣದಲ್ಲಿ ಗಮನ ಸೆಳೆದಿದ್ದರು. 2023ರ ಚುನಾವಣೆಯಲ್ಲಿ ಕೊನೆ ಕ್ಷಣದವರೆಗೂ ರಾಮಣ್ಣರಿಗೆ ಟಿಕೆಟ್ ಪಕ್ಕಾ ಎನ್ನಲಾಗಿತ್ತು. ಈ ಭರವಸೆಯ ಹಿನ್ನೆಲೆಯಲ್ಲಿಯೇ ಅವರು ಬೇರೆ ಪಕ್ಷದವರ ಆಹ್ವಾನ ತಿರಸ್ಕರಿಸಿ, ಕೊನೆಗೆ ಟಿಕೆಟ್ ವಂಚಿತರಾಗಿದ್ದರು.

ಅತಿಥಿ ಉಪನ್ಯಾಸಕರ ಸಮಸ್ಯೆಗಳ ಕುರಿತು ಅ.21ರಂದು ಸಭೆ

■ ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರನ್ನು ಪ್ರತಿ ವರ್ಷ ಆನ್‌ಲೈನ್ ಮೂಲಕ ನೇಮಕ ಮಾಡುವುದನ್ನು ನಿಲ್ಲಿಸಬೇಕು ಮತ್ತು ದ್ವಂದ್ವ ನಿಲುವುಗಳ ಆದೇಶಗಳನ್ನು ಉನ್ನತ ಶಿಕ್ಷಣ ಇಲಾಖೆಯು ಆದೇಶಿಸಬಾರದು ಎಂದು ರಾಜ್ಯ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘದ ರಾಜ್ಯಾಧ್ಯಕ್ಷ ಡಾ.ಹನುಮಂತಗೌಡ ಆರ್.ಕಲ್ಮನಿ ಅವರು ಖಂಡಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಅ.11ರಂದು ಬೆಂಗಳೂರಿನಲ್ಲಿ ಉನ್ನತ ಶಿಕ್ಷಣ ಇಲಾಖೆಯ ಆಯುಕ್ತರಾದ ಮಾನ್ಯ ಜಗದೀಶ್ ಜೆ. ಅವರನ್ನು ಸಂಘದ ಪದಾಧಿಕಾರಿಗಳು ಭೇಟಿಯಾಗಿ, ಅತಿಥಿ ಉಪನ್ಯಾಸಕರು ಬಹುದಿನಗಳಿಂದ ಅನುಭವಿಸುತ್ತಿರುವ ಹಲವಾರು ಸಮಸ್ಯೆಗಳ ಕುರಿತು ಸುದೀರ್ಘವಾಗಿ ಚರ್ಚಿಸಿದ ನಂತರ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇದೇ ಅ.21ರಂದು ಅತಿಥಿ ಉಪನ್ಯಾಸಕರ ಸಮಸ್ಯೆಗಳ ಕುರಿತು ಸಭೆಯನ್ನು ಕರೆದಿದ್ದಾರೆ. ಅಲ್ಲಿವರೆಗೂ ತಾವು ತಮ್ಮ ಕರ್ತವ್ಯಕ್ಕೆ ಹಾಜರಾಗಿ ಎಂದು ತಿಳಿಸಿದರು.

ಸಭೆಯಲ್ಲಿ ಏನಾದರೂ ನಕಾರಾತ್ಮಕವಾಗಿ ಉತ್ತರ ಬಂದರೆ ಅನಿವಾರ್ಯವಾಗಿ ರಾಜ್ಯಾದ್ಯಂತ ತರಗತಿಗಳನ್ನು ಬಹಿಷ್ಕರಿಸಿ ರಾಜ್ಯದ ಎಲ್ಲಾ ಉನ್ನತ ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕರ ಕಚೇರಿ ಮುಂದೆ ಧರಣಿ ಮಾಡಲಾಗುವುದು ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ಪೀಟರ್ ವಿನೋದ್ ಚೆಂದ, ಡಾ.ವಿದ್ಯಾ, ಡಾ.ಶೀತಲ್ ಕೃಷ್ಣಾ ಬೆಂತೂರ, ಡಾ.ಚಂದ್ರಶೇಖರ ಕಾಳಣ್ಣವರ, ರಾಜಕುಮಾರ್ ಶಂಕರ, ಜೆ. ವಿಜಯಕುಮಾರ, ವಿಜಯಶ್ರೀ ಸೇರಿದಂತೆ ಅತಿಥಿ ಉಪನ್ಯಾಸಕರು ಉಪಸ್ಥಿತರಿದ್ದರು.

'ಲಕ್ಷ್ಮೇಶ್ವರದ ಸಾಮ್ರಾಟ'ನಿಗೆ ಸಂಭ್ರಮದ ವಿದಾಯ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಶ್ರೀ ರಾಘವೇಂದ್ರ ಯುವಕ ಮಂಡಳದ ವತಿಯಿಂದ ಪ್ರತಿಷ್ಠಾಪಿಸಲಾಗಿದ್ದ ಲಕ್ಷ್ಮೇಶ್ವರದ ಸಾಮ್ರಾಟ್ ಗಣೇಶನ ಮೂರ್ತಿಯ ವಿಸರ್ಜನಾ ಕಾರ್ಯಕ್ರಮ ಬುಧವಾರ ಸಂಭ್ರಮದಿಂದ ಜರುಗಿತು. ಸಂಜೆ ರಾಘವೇಂದ್ರಸ್ವಾಮಿಗಳ ಮಠದಿಂದ ಪ್ರಾರಂಭವಾದ ಮೆರಣಿಗೆಯು ಶಾಂತಿಯುತವಾಗಿ ಸಾಗಿತು.

ಕಳೆದ ಸೆ. 18 ಮತ್ತು 19ರಂದು ಸ್ಥಾಪಿತಗೊಂಡಿದ್ದ ಸಾರ್ವಜನಿಕ ಗಣೇಶನ ಮೂರ್ತಿಗಳ ವಿಸರ್ಜನೆ ವೇಳೆಯಲ್ಲಿ ಯಾವುದೇ ರೀತಿ ಅಹಿತಕರ ಘಟನೆ ನಡೆಯದೆ ಯಶಸ್ವಿಯಾಗಿ ನೆರವೇರಿದವು. ಸುಮಾರು 15-20 ದಿನಗಳಿಂದ ನಿತ್ಯ ಕೆಲಸ ನಿರ್ವಹಿಸಿದ್ದ ಪೊಲೀಸ್ ಇಲಾಖೆಯ ಸಿಬ್ಬಂದಿಗಳಂತೂ ಈ ವರ್ಷದ ಗಣೇಶೋತ್ಸವ ಮುಗಿಯಿತು ಎಂದು ನಿಟ್ಟುಸಿರು ಬಿಟ್ಟರು. ಎಸ್‌ಪಿ ಬಿ.ಎಸ್ ನೇಮಗೌಡ, ಡಿ